ಪ್ರೊ॥ ಡಿ. ಲಿಂಗಯ್ಯ

ವ್ಯಕ್ತಿ ಪರಿಚಯ



ಕ್ಯಾತನಹಳ್ಳಿ ರಾಮಣ್ಣ

ಜನಪ್ರಿಯ ಜಾನಪದ ಪುಸ್ತಕ ಮಾಲೆ-೫೨

ಪ್ರೊ. ಡಿ. ಲಿಂಗಯ್ಯ

ವ್ಯಕ್ತಿ ಪರಿಚಯ

ಕ್ಯಾತನಹಳ್ಳಿ ರಾಮಣ್ಣ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

PROF. D. LINGAIAH- A Pen Portrait - By **Kyatanahalli Ramanna.** Pulished by **Karnataka Janapada Parishath.**
No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054.
Phone : 080-23605033. Janapada Loka : 7201143.

ಪ್ರಥಮ ಮುದ್ರಣ : ೨೦೧೦ ಪುಟಗಳು : ೩೨

ಪ್ರತಿಗಳು : ೨೦೦೦

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುಖಪುಟ ಚಿತ್ರ : **ಮಧು ಪೀಹಳ್ಳಿ**

ಮುದ್ರಕರು :
ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ-ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ಲೇಖಕರಾದ **ಶ್ರೀ ಕ್ಯಾತಹಳ್ಳಿ ರಾಮಣ್ಣ** ಅವರು **ಪ್ರೊ. ಡಿ. ಲಿಂಗಯ್ಯ** ಅವರನ್ನು ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೧೪-೫-೨೦೧೦

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಪ್ರೊ. ಡಿ. ಲಿಂಗಯ್ಯ

1

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಹೋಬಳಿಗೆ ಸೇರಿದ ಪೀಹಳ್ಳಿ ಎಂಬ ಗ್ರಾಮದವರಾದ ಪ್ರೊ. ದೇವೇಗೌಡ ಲಿಂಗಯ್ಯ ಅವರದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ. ಕಥೆ, ಕಾದಂಬರಿ, ಕಾವ್ಯ, ನಾಟಕ, ಸಂಶೋಧನೆ, ವಿಮರ್ಶೆ, ವ್ಯಕ್ತಿಚಿತ್ರ, ಜೀವನಚರಿತ್ರೆ, ಪ್ರಬಂಧ, ಸಂಪಾದನೆ – ಹೀಗೆ ಅವರ ಬಹುಮುಖ ಸಾಧನೆ ಇದ್ದರೂ ಈ ಬರಹದಲ್ಲಿ ಅವರ ಇನ್ನೊಂದು ಪ್ರಮುಖ ಸಾಧನೆಯಾದ ಜಾನಪದ ಸಾಧನೆಯನ್ನು ಕುರಿತು ಮಾತ್ರ ಪ್ರಸ್ತಾಪಿಸಿಲಾಗಿದೆ.

1939 ಡಿಸೆಂಬರ್ 16ರಂದು ಪೀಹಳ್ಳಿಯ ಕೆಳಗಲಹಟ್ಟಿ ದೇವೇಗೌಡ ಸಿದ್ದಮ್ಮ ದಂಪತಿಗಳ ನಾಲ್ಕನೆಯ ಮಗುವಾಗಿ ಲಿಂಗಯ್ಯ ಹುಟ್ಟಿದರು. ಒಟ್ಟು ಏಳುಜನ ಮಕ್ಕಳು. ಲಿಂಗಯ್ಯನವರಿಗೆ ಇಬ್ಬರು ಅಕ್ಕಂದಿರು, ಒಬ್ಬ ಅಣ್ಣ, ಮೂವರು ತಮ್ಮಂದಿರು. ಶಾಲೆಗಳು ಅಸ್ತಿತ್ವಕ್ಕೆ ಬಂದಮೇಲೂ ಕೂಲಿಮಠದಲ್ಲಿ ಮರಳಿನ ಮೇಲೆ ಬೆರಳಿನಿಂದ ಬರೆಯುತ್ತ ಅಕ್ಷರಾಭ್ಯಾಸ ಮಾಡಿದ ಅಪರೂಪದ ಉದಾಹರಣೆ ಡಿ. ಲಿಂಗಯ್ಯ ಅವರದು. ಶಾಲೆಗಾಗಿ ಇನ್ನೊಂದು ಊರಿಗೆ ಕಳಿಸುವುದಕ್ಕಿಂತ ತಮ್ಮೂರಿನಲ್ಲೇ ಇರುವ ಕೂಲಿಮಠಕ್ಕೆ ಸೇರಿಸುವುದೇ ಸುಲಭ ಎನ್ನಿಸಿತ್ತೇನೋ ತಂದೆ ದೇವೇಗೌಡರಿಗೆ. ಪೀಹಳ್ಳಿಗೆ ಶಾಲೆ ಬಂದ ಮೇಲೆ ದೇವೇಗೌಡರು

ಕೂಲಿಮಠವನ್ನು ಬಿಡಿಸಿ ಶಾಲೆಗೆ ಸೇರಿಸಿದ್ದರು ಮಗನನ್ನು. ಹೀಗೆ ಪೀಹಳ್ಳಿಯಿಂದ ಪ್ರಾರಂಭವಾದ ಲಿಂಗಯ್ಯ ಅವರ ವ್ಯಾಸಂಗವು ಕೊತ್ತತ್ತಿ, ಮಂಡ್ಯಗಳಲ್ಲಿ ಮುಂದುವರಿದು ಮೈಸೂರಿನಲ್ಲಿ ಮುಕ್ತಾಯವಾಯಿತು. ಮೈಸೂರಿನ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಎಂ.ಎ., ಮುಗಿದ ಕೂಡಲೆ ಬೆಂಗಳೂರಿನ ವಿಶ್ವೇಶ್ವರಪುರದ ಕಾಲೇಜಿನಲ್ಲಿ ಅಧ್ಯಾಪಕರಾದರು.

ತಮ್ಮ ಉದ್ಯೋಗದ ಅವಧಿಯಲ್ಲಿ ಲಿಂಗಯ್ಯ ಅವರು ಹಲವು ಹೊಣೆಗಳನ್ನು ನಿಭಾಯಿಸಿದ್ದಾರೆ. ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಸಂಜೆ ಕಾಲೇಜಿಗೆ ಅನಂತರ ಹಗಲು ಕಾಲೇಜಿಗೆ ಪ್ರಾಂಶುಪಾಲರಾಗಿ, ಇವುಗಳ ಜೊತೆಜೊತೆಗೆ ಕಾಲೇಜಿನ ವಾರ್ಷಿಕ ಸಂಚಿಕೆಯಾದ 'ಪ್ರತಿಭಾ'ಕ್ಕೆ ಸತತ ಹತ್ತು ವರ್ಷ, 'ಯುವಶಕ್ತಿ' ವಾರ್ಷಿಕ ಸಂಚಿಕೆಗೆ ಹನ್ನೆರಡು ವರ್ಷ ಸಂಪಾದಕರಾಗಿ, ರಾಷ್ಟ್ರೀಯ ಸೇವಾಯೋಜನೆಯ ಅಧಿಕಾರಿಯಾಗಿ, ಸಂಜೆ ಕಾಲೇಜಿನ ವಾರ್ಷಿಕ ಸಂಚಿಕೆ (ಅಲ್ಲಿ ಇದ್ದಷ್ಟು ಕಾಲವೂ) 'ಚಿಂತನ'ದ ಸಂಪಾದಕರಾಗಿ, ವಿದ್ಯಾರ್ಥಿ ಕ್ಷೇಮಾಧಿಕಾರಿಯಾಗಿ, ಬೆಂಗಳೂರಿನಲ್ಲಿ ಆಗ ನೆಲೆಸಿದ್ದ ಆಜಾದ್‌ನಗರದ ಪುಲಿಕೇಶಿ ಕನ್ನಡ ಕಲಾವೃಂದದ ಅಧ್ಯಕ್ಷರಾಗಿ ಹೀಗೆ ಇನ್ನೂ ಅನೇಕ ಮುಖಗಳಲ್ಲಿ ಲಿಂಗಯ್ಯನವರನ್ನು ಕಾಣಬಹುದು.

ಪ್ರೊ. ಡಿ. ಲಿಂಗಯ್ಯ ಅವರ ಪ್ರಕಟಣೆಗಳ ಸಂಖ್ಯೆಯು 80ರ ಗಡಿಯನ್ನು ದಾಟಿದೆ. ಎಂಬತ್ತು ಎಂಬುದು ಸಣ್ಣ ಸಂಖ್ಯೆಯುಲ್ಲ. ಅವರ ಕಾರ್ಯಕ್ಷೇತ್ರದ ವ್ಯಾಪ್ತಿ ತುಂಬ ವಿಶಾಲವಾಗಿರುವುದರಿಂದ ಜಾನಪದಕ್ಕೆ ಸಂಬಂಧಿಸಿದ ಪ್ರಕಟಣೆಗಳ ಸಂಖ್ಯೆ ಅಷ್ಟೇನೂ ದೊಡ್ಡದಲ್ಲ. ಹದಿನೇಳು ಪುಸ್ತಕಗಳು ಜಾನಪದಕ್ಕೆ

ಸಂಬಂಧಿಸಿವೆ. ಸಂಖ್ಯೆ ದೊಡ್ಡದಲ್ಲ ಅನ್ನಿಸಿದರೂ ಮೌಲ್ಯದ ದೃಷ್ಟಿಯಿಂದ ನೋಡಿದರೆ ಲಿಂಗಯ್ಯ ಅವರ ಸಾಧನೆ ಸಣ್ಣದಲ್ಲ ಅನ್ನಿಸುತ್ತದೆ. ಸ್ವಾರಸ್ಯದ ಸಂಗತಿಯೆಂದರೆ, ಒಟ್ಟಾರೆಯಾಗಿ ಅವರು ಪಡೆದಿರುವ ಪ್ರಶಸ್ತಿಗಳ ಸಂಖ್ಯೆಯೂ ಹದಿನೇಳು !

ಜಾನಪದ ಗ್ರಂಥಗಳ ಸಂಖ್ಯೆ ಸಣ್ಣದಿರಲಿ ದೊಡ್ಡದಿರಲಿ, ಪ್ರೊ. ಲಿಂಗಯ್ಯ ಅವರು ಯಾವ ಕೆಲಸಕ್ಕೆ ಕೈಹಾಕಿದರೂ ಅದಕ್ಕೊಂದು ಗಾಂಭೀರ್ಯ ಪ್ರಾಪ್ತವಾಗುತ್ತದೆ. ಅವರ ಈ ಮೂಲ ಗುಣ ಜಾನಪದಕ್ಕೆ ಸೀಮಿತವಾದುದಲ್ಲ. ಎಲ್ಲ ಬಗೆಯ ಸಾಹಿತ್ಯಿಕ ಚಟುವಟಿಕೆಗಳಲ್ಲೂ ಪ್ರವಹಿಸುತ್ತ ಬಂದಿರುವ ಗುಣ ಅದು.

2

ಅವರ ಪ್ರಾರಂಭದ ಜಾನಪದ ಕೃತಿಯೇ ಒಂದು ಅಧ್ಯಯನ ಕೃತಿ. ಮಂಡ್ಯ, ಮೈಸೂರು, ಹಾಸನ, ತುಮಕೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಮಾತ್ರ ಆಚರಿಸಲ್ಪಡುವ, ಕೇವಲ ಹೆಣ್ಣು ಮಕ್ಕಳಿಂದಲೇ ಆಚರಿಸಲ್ಪಡುವ, 'ಕೊಂತಿಪೂಜೆ' ಲಿಂಗಯ್ಯ ಅವರ ಮೊದಲ ಜಾನಪದ ಕೃತಿ. ಕೊಂತಿಪೂಜೆಯನ್ನು ಕುರಿತ ಕ್ಷೇತ್ರಕಾರ್ಯ ಮಾಡಿದ ಮೊದಲಿಗರು ಲಿಂಗಯ್ಯ ಅವರು. ಇವರಿಗಿಂತ ಮೊದಲು ಲೇಖನ ಬರೆದ ಎಂ. ಆರ್. ಲಕ್ಷ್ಮಮ್ಮ ಅವರು ಮೈಸೂರಿನ ಕೇರಿಯೊಂದರಲ್ಲಿ ತಮ್ಮ ಮನೆಯ ಬಳಿ ನಡೆಯುತ್ತಿದ್ದ ಕೊಂತಿಪೂಜೆ ಒಂದನ್ನು ಮಾತ್ರ ನೋಡಿದ್ದುದಷ್ಟೆ. ಆದ್ದರಿಂದ ಮೊದಲ ಸಲ ಅಧ್ಯಯನ ಮಾಡಿದವರು ಲಿಂಗಯ್ಯ ಅವರೇ. ಕೊಂತಿಪೂಜೆಯ ನಾಯಕಿ, ವಸ್ತು, ಕಾಲ, ಸಾಮಾಜಿಕ ಹಿನ್ನೆಲೆ, ಕೊಂತಿ ಪದಗಳ ಪ್ರಾಚೀನತೆ, ಆಚರಿಸುವ ಸ್ಥಳಗಳು ಇತ್ಯಾದಿ ಎಲ್ಲ ನಿಟ್ಟಿನಿಂದಲೂ ಅಧ್ಯಯನ ನಡೆಸಿರುವ ಲಿಂಗಯ್ಯ

ಅವರು, ಕೊನೆಯಲ್ಲಿ ಕೊಂತಿಪದಗಳ ಅಳಿವು ಉಳಿವುಗಳ ಬಗ್ಗೆ ತುಂಬ ಕಳಕಳಿಯಿಂದ ಮಾತಾಡಿದ್ದಾರೆ. ದಕ್ಷಿಣ ಕರ್ನಾಟಕದ ಕೇವಲ ಮೂರ್ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಆಚರಿಸಲ್ಪಡುವ ಕೊಂತಿಪೂಜೆಯ ಸಂದರ್ಭದಲ್ಲಿ ಹಾಡಲಾಗುವ ಹಾಡುಗಳು ವರ್ಷಕ್ಕೊಮ್ಮೆ ಮಾತ್ರ ಹಾಡುವಂಥವು. ಹಾಡುವ ಹಿರಿಯ ತಲೆಗಳು ಮರೆಯಾದಂತೆಲ್ಲ ಹಾಡುಗಳ ಸಂಖ್ಯೆ ಕಡಮೆಯಾಗುತ್ತಿವೆ. ಕಾಲಕ್ರಮೇಣ ಎಲ್ಲವೂ ಕಳೆದುಹೋಗಬಹುದೆಂಬ ಆತಂಕ ಲಿಂಗಯ್ಯ ಅವರನ್ನು ಕಾಡಿದೆ. ಅವರ ಸಲಹೆ ಹೀಗಿದೆ : 'ಶೀಘ್ರ ಸಂಶೋಧನೆಯಾಗದಿದ್ದರೆ ಇವು ನಮ್ಮ ಕೈತಪ್ಪಿಹೋಗುವುದು ಖಂಡಿತ'. ಆದ್ದರಿಂದ, ಕೊಂತಿಪೂಜೆಯ ಬಗ್ಗೆ ಸಂಪೂರ್ಣ ಸಂಗ್ರಹ ಹಾಗೂ ವಿಸ್ತೃತ ಅಧ್ಯಯನ ನಡೆಯಬೇಕು ಎಂಬುದು ಅವರ ಕಳಕಳಿ. ಅಧಿಕೃತವಾಗಿ ಕೊಂತಿಪೂಜೆ ಬೆಳಕಿಗೆ ಬಂದದ್ದು, ಚರ್ಚೆಗೆ ಗ್ರಾಸವಾದದ್ದು, ಜಾನಪದಾಸಕ್ತರ ಗಮನ ಸೆಳೆದದ್ದು, ಲಿಂಗಯ್ಯ ಅವರ 'ಕೊಂತಿಪೂಜೆ' ಕೃತಿಯೇ. ಇದು ಪ್ರಕಟವಾದದ್ದು 1967ರಲ್ಲಿ ; ಜಾನಪದವು ವಿಶ್ವವಿದ್ಯಾನಿಲಯ ಪ್ರವೇಶಿಸಿದ ಸಂದರ್ಭದಲ್ಲಿ !

3

ಅದೇ ಕುತೂಹಲ, ಅದೇ ಅಧ್ಯಯನ ದೃಷ್ಟಿ, ಮತ್ತೆ ಕಂಡು ಬರುವುದು 1976ರಲ್ಲಿ ಪ್ರಕಟವಾದ 'ಬೋರೆದೇವರು' ಎಂಬ ಕೃತಿಯಲ್ಲಿ. ಇಲ್ಲಿ ಕೂಡ ಲಿಂಗಯ್ಯ ಅವರು ವಹಿಸಿರುವ ಆಸಕ್ತಿ, ಪಟ್ಟಶ್ರಮ, ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಬೋರೆದೇವರು ಯಾರು ಎಂಬ ಬಗ್ಗೆ ಅದು ಪ್ರಕಟವಾದ ಮೇಲೆ ಬಿಸಿಬಿಸಿ ಚರ್ಚೆಗಳು ನಡೆದದ್ದುಂಟು. ತಮ್ಮ ಕ್ಷೇತ್ರಕಾರ್ಯದ ವ್ಯಾಪ್ತಿಯಲ್ಲಿ

ಲಭ್ಯವಾದ ಎಲ್ಲ ಮಾಹಿತಿಗಳನ್ನು ನೀಡುವ ಮೂಲಕ ಈ ಅಧ್ಯಯನವನ್ನು ಲಿಂಗಯ್ಯ ಅವರು ಒಂದು ಅಪರೂಪದ ಕೃತಿಯನ್ನಾಗಿಸಿದ್ದಾರೆ. ಇದುವರೆಗೆ ಯಾರೂ ಈ ದೇವರ ಬಗ್ಗೆ ಕೆಲಸ ಮಾಡಿಲ್ಲ ಎಂಬ ಮಾತಿನಲ್ಲಿಯೇ ಲೇಖಕರ ಸಾರ್ವಭೌಮತ್ವವಿದೆ.

'ಬೋರೆ' ಎಂಬ ಪದದ ನಿಷ್ಪತ್ತಿಯನ್ನು ಚರ್ಚಿಸುವ ಮೂಲಕ ವಿಷಯವನ್ನು ಪ್ರಾರಂಭಿಸಿರುವ ಲಿಂಗಯ್ಯ ಅವರು ಹಂತಹಂತವಾಗಿ ಎಲ್ಲವನ್ನೂ ವಿವರಿಸುತ್ತ ಸಾಗುತ್ತಾರೆ. ಬೋರೆದೇವರ ಒಕ್ಕಲು, ಬೋರೆದೇವರ ಗುಡಿಯ ಹಾಗೂ ಅದಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಗಳನ್ನು ನೋಡಿಕೊಳ್ಳುವ ಯಜಮಾನನ ಪಾತ್ರ ಮತ್ತು ಹೊಣೆ, ಅರ್ಚಕರ ಬಗೆಗಿನ ವಿವರಗಳು, ತೋಟಿಯ ಪಾತ್ರ, ಅರ್ಚಕ ಮತ್ತು ತೋಟಿಯ ಬದುಕಿನ ಬಗ್ಗೆಯೂ ನಮ್ಮ ಜನಪದರು ಯೋಚಿಸಿ ಅವರಿಗಾಗಿ ಕೊಡುಗೆ ಭೂಮಿಯನ್ನು ಬಿಡುವ ಮಾನವೀಯತೆಯನ್ನು ಮೆರೆದಿರುವ ಅಂಶವನ್ನು ಕೂಡ ಲಿಂಗಯ್ಯ ಅವರು ಬಿಡದೆ ಪ್ರಸ್ತಾಪಿಸಿದ್ದಾರೆ. ದೇವರ ಜಂಗಮಮೂರ್ತಿಯಂತಿರುವ ಗುಡ್ಡನ ಅಸ್ತಿತ್ವ ಮತ್ತು ಮಹತ್ವದ ಬಗ್ಗೆ ಅಪರೂಪದ ಸಂಗತಿಗಳಿವೆ.

ಯುಗಾದಿಗೆ ಮುಂಚಿನ ಹತ್ತು ಹದಿನೈದು ದಿನಗಳೊಳಗೆ ಬರುವ ಭಾನುವಾರದಂದು ಬೋರೆದೇವರ ಹಬ್ಬ ನಡೆಯುತ್ತದೆ. ಎಲ್ಲ ಗ್ರಾಮೀಣ ಹಬ್ಬಗಳಂತೆ ಇಲ್ಲಿಯೂ ಸಹಕಾರ ತತ್ತ್ವ ಇದೆ. ಕೊಂಡಕ್ಕೆ ಕೊಂಟುಹಾಕುವಿಕೆಯೇ ಹಬ್ಬದ ಪ್ರಾರಂಭ. ಇದೇ ಸಂದರ್ಭದಲ್ಲಿ ಮನೆಕೈಯಾಡಿಸುವ ಕೆಲಸವೂ ನಡೆಯುತ್ತದೆ. ಬಹುತೇಕ ಹೆಂಚಿನ ಮನೆಗಳೇ ಇರುವುದರಿಂದ ವರ್ಷಕ್ಕೊಮ್ಮೆ

ಹೆಂಚುಗಳ ಪರಿಶೀಲನೆ ಅಗತ್ಯ. ಮಳೆಗಾಲದ ಪ್ರಾರಂಭವೂ ಅದಾಗಿರುವುದರಿಂದ, ಒಡೆದ ಹೆಂಚುಗಳನ್ನು ಪತ್ತೆ ಮಾಡಿ, ಅಲ್ಲಿ ಹೊಸ ಹೆಂಚುಗಳನ್ನು ಜೋಡಿಸುವ ಕ್ರಿಯೆ ಅನಿವಾರ್ಯ. ಹಬ್ಬವು ಒಂದು ನೆಪ ಅಷ್ಟೆ. ಸಾಮಾನ್ಯವಾಗಿ ಮಣ್ಣಿನ ಮಡಕೆಗಳಲ್ಲೇ ಅಡುಗೆ ಮಾಡಿಕೊಳ್ಳುವ ಸಂಪ್ರದಾಯ ಇದ್ದುದರಿಂದ, ಈ ಹಬ್ಬದ ಸಂದರ್ಭದಲ್ಲೆ ಹೊಸ ಮಡಕೆಗಳನ್ನು ಕೊಳ್ಳುವ ಕೆಲಸವೂ ನಡೆಯುತ್ತದೆ.

ಕೊಂಡದ ಉದ್ದ ಅಗಲ ಆಳ, ಕೊಂಡಕ್ಕೆ ಮನೆಗೊಂದು ಕೊಂಟುಹಾಕುವಿಕೆ, ದೇವರ ಹೆಸರಿನಲ್ಲಿ ಬಸವನನ್ನು ಬಿಡುವಿಕೆ, ಕೊಂಡೆಬಂಡಿಯ ರಚನೆ ಮತ್ತು ಸಂಪ್ರದಾಯ, ಹೋಮ, ಪತ್ತಿನ ಸೇವೆ, ಮೀಸಲು ನೀರು, ಈರರ ಕುಣಿತ, ಲಿಂಗದೀರಯ್ಯ, ಎಡೆ, ಪರ, ಬಾಯಿಬೀಗ ಹೀಗೆ ಯಾವೊಂದು ಅಂಶವನ್ನೂ ಲಿಂಗಯ್ಯ ಅವರು ಕಡೆಗಣಿಸಿಲ್ಲ. 'ಬೋರೆದೇವರ ಹಬ್ಬದ ಸಂಪ್ರದಾಯ ಹೀಗೇ ಮುಂದುವರಿಯದಿರಬಹುದು... ಆದರೆ ಪುರುಷಶಕ್ತಿಗೆ ಮಿಗಿಲಾದ ದೈವಶಕ್ತಿಗೆ ಮಾನವ ಒಂದಲ್ಲ ಒಂದು ರೀತಿಯಲ್ಲಿ ಮಣಿಯದೆ ಇರಲಾರ ಎಂಬ ನಂಬಿಕೆಯಲ್ಲಿ ಬದಲಾವಣೆಯಾಗಲಾರದು' – ಇದು ಬೋರೆದೇವರ ಹಬ್ಬದ ಉಪಸಂಹಾರದಲ್ಲಿ ಲಿಂಗಯ್ಯ ಅವರು ಹೇಳಿರುವ ಸೂಕ್ತ ಮಾತು.

4

1979ರಲ್ಲಿ ಪ್ರಕಟವಾದ 'ಪಿರಿಯಾಪಟ್ಟಣದ ಜಗಳ' ಕೂಡ ಲಿಂಗಯ್ಯ ಅವರ ಒಂದು ಪ್ರಮುಖ ಸಂಗ್ರಹ. ಯಾವ ಸಂಕರಕ್ಕೂ ಒಳಗಾಗದೆ ಶುದ್ಧ ರೂಪದಲ್ಲಿ, ಮೂಲ ರೂಪದಲ್ಲಿ ಪ್ರಕಟವಾಗಿರುವ ಕಾವ್ಯ. 'ಕಾಳಗ' ಎಂಬ ಶಬ್ದವನ್ನು ಬಳಸದೆ ಹಾಡುಗಾರರು

ಹೇಗೆ ಅದನ್ನು ಉಚ್ಚರಿಸುತ್ತಿದ್ದರೋ ಹಾಗೆಂಯೇ ಉಳಿಸಿಕೊಳ್ಳಲಾಗಿದೆ. ಅಲ್ಲದೆ, ಈಚೆಗೆ 'ಜಗಳ' ಎಂಬ ಶಬ್ದವು ಅರ್ಥಸಂಕುಚಿತವಾಗಿ ಬಳಕೆಯಾಗುತ್ತಿದೆ, ಅದರ ನಿಜವಾದ ಅರ್ಥ ಕದನ, ಯುದ್ಧ, ಹೋರಾಟ ಎಂಬುದೇ ಆಗಿದೆ ಎಂಬ ವಿವರಣೆಯನ್ನೂ ನೀಡಲಾಗಿದೆ.

ಈ ಕಾವ್ಯವು ತಮ್ಮ ಪ್ರಯತ್ನವೆಂಬ ಯಾವ ಅಹಮ್ಮೂ ಇಲ್ಲದೆ, ಇದು ಯಾಕೆ ಗಮನಾರ್ಹ ಎಂಬುದಕ್ಕೆ ಲಿಂಗಯ್ಯ ಅವರು ಕೆಲವು ಕಾರಣಗಳನ್ನು ಕೊಡುತ್ತಾರೆ : 1. ಇದು ಹರಿಜನ ಸ್ತ್ರೀಯರು ಹಾಡಿದ್ದು. ಇವರು ಶುದ್ಧ ಜನಪದರು. ಅನ್ಯಪ್ರಭಾವ ಆಗಿಲ್ಲದವರು. ಸ್ವಂತ ತಾಯಿಯಿಂದ ಕಲಿತು ಪರಂಪರಾನುಗತವಾಗಿರುವ ಕತೆಯನ್ನು ಹಾಗೆಯೇ ನೆನಪಿನಲ್ಲಿ ಉಳಿಸಿಕೊಂಡಿರುವವರು. 2. ಇವರು ಬುದ್ಧಿವಂತಿಕೆಯಿಂದ ಮೂಲ ಕತೆಯನ್ನು ಹಿಂಜುವ ವ್ಯವಹಾರಸ್ಥ ನಿರೂಪಕರಲ್ಲ ಅಥವಾ ಸಿದ್ಧ ನಿರೂಪಕರಲ್ಲ. 3. ಹರಿಜನರ ಮೂಲ ಉಚ್ಚಾರಣೆಯಲ್ಲಿ ಸಂಗ್ರಹಿಸಿ ಪ್ರಕಟಿಸಿರುವುದು.

ಹೀಗೆ ತಮ್ಮ ಸಂಗ್ರಹದ ಗಮನಾರ್ಹ ಅಂಶಗಳನ್ನು ಪಟ್ಟಿಮಾಡಿರುವುದಲ್ಲದೆ, ಮೈಸೂರು ಮತ್ತು ಪಿರಿಯಾಪಟ್ಟಣದ ಇತಿಹಾಸವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿರುವ ಲಿಂಗಯ್ಯ ಅವರು ಪಿರಿಯಾಪಟ್ಟಣದ ಯುದ್ಧ ನಡೆದುದಕ್ಕೆ ಕಾರಣವನ್ನು ಹೀಗೆ ಹೇಳುತ್ತಾರೆ : 'ಒಟ್ಟಿನಲ್ಲಿ ಪಿರಿಯಾಪಟ್ಟಣದ ಯುದ್ಧ ನಡೆದದ್ದು ವೀರರಾಜ ತನ್ನ ಮಗಳನ್ನು ಮೋಹಿಸಿದ್ದಕ್ಕಾಗಿ ಅಲ್ಲ ; ಮೈಸೂರು ಅರಸರು ಕಪ್ಪ ವಸೂಲಿ ಮಾಡುವುದಕ್ಕಾಗಿ'. ಆ ಸಂದರ್ಭದ ಪತ್ರ ವ್ಯವಹಾರವನ್ನು ಪ್ರಸ್ತಾಪಿಸುತ್ತ 'ಹೀಗಾಗಿರುವ ಸಾಧ್ಯತೆ

ಹೆಚ್ಚಾಗಿದೆ' ಎಂಬ ನಿಲುವಿಗೆ ಬರುತ್ತಾರೆ.

5

ಪ್ರೊ. ಡಿ. ಲಿಂಗಯ್ಯ ಅವರ ಜನಪದ ಕಾವ್ಯಸಂಕಲನಗಳ ಸಂಖ್ಯೆ ನಾಲ್ಕೆ ಆದರೂ ಅವುಗಳಲ್ಲಿ ಎರಡು ತುಂಬ ಸದ್ದು ಮಾಡಿದಂಥವು. 1973ರಲ್ಲಿ ಪ್ರಕಟವಾದ ಅವರ ಮೊದಲ ಸಂಕಲನ 'ಬಯಲುಸೀಮೆಯ ಜನಪದ ಗೀತೆಗಳು' ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಗಳಿಸಿ ಸದ್ದುಮಾಡಿತು. ಆಗಿನ್ನೂ ಜಾನಪದ ಅಕಾಡೆಮಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ಈ ಸಂಕಲನವು ಅನೇಕ ಕಾರಣಗಳಿಗಾಗಿ ಮಹತ್ವಪೂರ್ಣವೆನಿಸಿತು. ಇದರಲ್ಲಿ ಐದು ಬಗೆಯ ಐವತ್ತು ಹಾಡುಗಳಿವೆ : ಜನಪದ ಕಥನ ಕಾವ್ಯಗಳು, ದೇವರ ಪದಗಳು, ಮದುವೆಯ ಪದಗಳು, ಒಸಗೆಯ ಪದಗಳು, ಜನಪದ ಭಾವಗೀತೆಗಳು.

ಮೊದಲನೆಯ ಭಾಗದಲ್ಲಿ, ಮಲ್ಲಿಗೆ ಮಾದೇವಿ, ಕುಸುಮಾಲೆ, ಮಲ್ಲಿಗೆರಾಯ, ಶಂಕಮ್ಮ ಎಂಬ ನಾಲ್ಕು ಕಥನ ಕಾವ್ಯಗಳಿವೆ. ಎರಡನೆ ಭಾಗದಲ್ಲಿ, ಬೋರೆದೇವರು, ಶಂಭುದೇವರು, ಮಾದೇಶ್ವರ, ಹರಕೇಶ್ವರ, ಲಾಳನಕೆರೆ ಬಸವ, ಬ್ಯಾಲಕಮ್ಮ, ಮುದ್ದಮ್ಮ, ಹೊಂಬಾಳಮ್ಮ, ಮಾರಮ್ಮ, ಕ್ಯಾತಮ್ಮ, ಮಾಸ್ತಮ್ಮ ಎಂಬ ಹನ್ನೊಂದು ದೇವರ ಪದಗಳಿವೆ. ಮೂರನೆಯ ಭಾಗದಲ್ಲಿ ಮನೆಶಾಸ್ತ್ರ, ವಿಳ್ಳೆಶಾಸ್ತ್ರ, ನೀರು ಹೊಯ್ಯುವುದು, ಸರಕ್ಕಿ ಇಡುವುದು, ಶಾಸ್ತ್ರದ ಬತ್ತ ಕುಟ್ಟುವುದು, ಹಸೆಯ ಕಂಬ ತರುವುದು, ಬೀಗರನ್ನು ಕರೆಯುವುದು, ಬೀಗರಿಗೆ ಸಾಮಾನು ಕೊಡುವುದು, ದೇವರು ತರುವುದು, ಕಂಕಣ ಕಟ್ಟುವುದು, ಬಾಳೆ ಎಲೆಯ ಶಾಸ್ತ್ರ, ಗಂಡು ಕರೆಯುವುದು, ಎಳವಾರ ತರುವುದು, ಕದಳಾರತಿ ಎತ್ತುವುದು,

ಧಾರೆ ಹೊಯ್ಯುವುದು, ಗುಡಿಯ ಮುಂದೆ, ಮಗುವನ್ನು ತೂಗುವುದು, ಬುವ ಇಕ್ಕುವುದು, ಬಾಗಿಲು ತಡೆಯುವುದು, ಗಂಡು ಹೆಣ್ಣಿಗೆ ನೀರು ಹೊಯ್ಯುವುದು, ಆರತಿ ಬೆಳಗುವುದು- ಹೀಗೆ ಮದುವೆಯ ಸಂದರ್ಭದ ಪ್ರತಿಘಟ್ಟದಲ್ಲೂ ಹಾಡುವ ಹಾಡುಗಳನ್ನು ನೀಡಲಾಗಿದೆ. ನಾಲ್ಕನೆಯ ಭಾಗದಲ್ಲಿ, ನೆರೆದ ಹೆಣ್ಣನ್ನು ಗುಡ್ಲು ಕೂಡುವುದು, ಮಡಿಲು ತುಂಬುವುದು, ಒಸಗೆ, ಸನ್ನೆಯ ಪದಗಳು ಎಂಬ ನಾಲ್ಕು ಬಗೆಯ ಹಾಡುಗಳಿವೆ. ಐದನೆಯ ಭಾಗದಲ್ಲಿ, ಹಿಟ್ಟು ತರುವುದನ್ನು ಮರೆತೀಯೇ?, ಹೆಂಡತಿಯ ಮುನಿಸು, ಎಲ್ಲಾಡಿ ಒಡೆದೆ ಬಳೆಗಳಾ?, ತಂಗಿಗೆ ಕಾಣಿಕೆ, ಅಣ್ಣನ ಬಯಕೆ, ಬೆಳಗಾಯ್ತು ಎಚ್ಚರಿಸೊ ಬೆಡಗೀಯಾ, ಸಂಗಾತಿ, ಬೀರಪ್ಪ, ಹಿಟ್ಟುಮಾಡಿ ಸೊಪ್ಪುಮಾಡಿ, ಸೊಲ್ಲು ಕೇಳಿ ಸೂಳೆ ತಡೆದಾಳು ಎಂಬ ಹತ್ತು ಜನಪದ ಭಾವಗೀತೆಗಳಿವೆ.

ಹೀಗೆ, ಪರಿವಿಡಿಯ ಪುಟದಲ್ಲಿ ಶೀರ್ಷಿಕೆಗಳನ್ನು ನೀಡಿ ಕೈಬಿಟ್ಟಿದ್ದರೆ ಇದೊಂದು ಸಾಮಾನ್ಯ ಸಂಗ್ರಹವಾಗಿ ಉಳಿದುಬಿಡುತ್ತಿತ್ತೆಂದು ತೋರುತ್ತದೆ. ಇದೊಂದು ಮಹತ್ವಪೂರ್ಣ ಸಂಗ್ರಹವಾಗಲು, ಅಧ್ಯಯನಾರ್ಹ ಕೃತಿಯಾಗಲು, ಲಿಂಗಯ್ಯ ಅವರು ಅನುಸರಿಸಿರುವ ಕ್ರಮವು ಅನುಕರಣೀಯವಾಗಿದೆ. 'ನನ್ನ ನುಡಿ' ಎಂಬ ಲೇಖಕರ ಮಾತಿನಲ್ಲಿ ಪ್ರಸ್ತಾಪವಾಗಿರುವ ಚಿಂತನೆಗಳು, ಪುಸ್ತಕದ ಕೊನೆಯಲ್ಲಿ ನೀಡಿರುವ 'ಟಿಪ್ಪಣಿಗಳು' ಹಾಗೂ 'ಅರ್ಥಕೋಶ', ನಿರೂಪಕರ ಪರಿಚಯ ಇವುಗಳಿಂದಾಗಿ ಈ ಸಂಕಲನವು ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ.

'ನನ್ನ ನುಡಿ' ಎಂಬ ಲೇಖಕರ ಮಾತುಗಳು ಜನಪದ ಸಾಹಿತ್ಯ ಸಂಗ್ರಹಣೆಯನ್ನು ಕುರಿತು ಕೆಲವು ಪ್ರಮುಖ ಅಂಶಗಳನ್ನು

ಒಳಗೊಂಡಿವೆ. ಇಲ್ಲಿ ಲಿಂಗಯ್ಯ ಅವರು ಸ್ವತಃ ತಮ್ಮ ಅನುಭವಗಳನ್ನೆ ಹೇಳಿಕೊಂಡಿದ್ದರೂ ಜನಪದ ಸಾಹಿತ್ಯದ ಸಂದರ್ಭದಲ್ಲಿ ಕೆಲವು ಅನುಕರಣೀಯ ಸಂಗತಿಗಳಿವೆ. ಜನಪದ ಸಾಹಿತ್ಯವು ಒಂದು ಶ್ರಮಮೂಲ ಸೃಷ್ಟಿ. ಶ್ರಮ ಇಲ್ಲದೆ ಜನಪದ ಸಾಹಿತ್ಯವಿಲ್ಲ. ಬೀಸುವ ಕಾಯಕ ಕೂಡ ಶ್ರಮವನ್ನೇ ಅಪೇಕ್ಷಿಸುವಂಥದು. ಈ ಪುಟಗಳಲ್ಲಿರುವ ಲಿಂಗಯ್ಯ ಅವರ ಕೆಲವು ಮಾತುಗಳು ಹೀಗಿವೆ: ನಮ್ಮ ಮನೆಯಲ್ಲಿ ಎರಡು ರಾಗಿಕಲ್ಲುಗಳಿದ್ದುವು. ಪ್ರತಿದಿನ ಬೆಳಿಗ್ಗೆ ಮೊದಲ ಕೋಳಿ ಕೂಗುವ ಹೊತ್ತಿಗೆ ಸರಿಯಾಗಿ ಅವುಗಳ ದನಿ ಕೇಳುತ್ತಿತ್ತು.... ರಾಗಿಕಲ್ಲು ಆಡುವ ಕಡೆ ಜನಪದ ಹಾಡು ಇರುತ್ತ. ಆ ಹೆಂಗಸರು ರಾಗಿಕಲ್ಲಿನ ಶ್ರುತಿಗೆ ಹೊಂದಿಸಿ ರಾಗವಾಗಿ ಹಾಡುತ್ತಿದ್ದ ಹಾಡುಗಳು ನಮಗೆಲ್ಲ ಜೋಗುಳವಾಗಿರುತ್ತಿದ್ದುವು. ನನ್ನ ಬಾಲ್ಯದಲ್ಲಿ ಹೆಚ್ಚು ಕಡಮೆ ಪ್ರತಿನಿತ್ಯ ಇಂಥಾ ಹಾಡುಗಳನ್ನು ಕೇಳುತ್ತಿದ್ದೆ.... ರಾಗಿಕಲ್ಲಿನ ದನಿ ನಿಂತ ಕಡೆ ಜನಪದ ಹಾಡಿನ ದನಿಯೂ ನಿಲ್ಲುತ್ತದೆ'.

ಹಬ್ಬಗಳು, ಮದುವೆಗಳು, ದನ ಮೇಯಿಸುವ ಸಂದರ್ಭಗಳು. ನಾಟಿಯ ಸಂದರ್ಭಗಳು ಮುಂತಾದ ಸಂದರ್ಭಗಳಲ್ಲೆಲ್ಲ ಲಿಂಗಯ್ಯ ಅವರು ಹಾಡುಗಳನ್ನು ಕೇಳಿಸಿಕೊಳ್ಳುತ್ತಿದ್ದರೂ ಅವನ್ನು ಸಂಗ್ರಹಿಸಬೇಕೆಂಬ ಕಲ್ಪನೆ ಅವರಿಗಿರಲಿಲ್ಲ. ಸಂಗ್ರಹಿಸುವ ಆಲೋಚನೆ ಬಂದ ಎರಡು ಸಂದರ್ಭಗಳನ್ನು ಹೇಳಿದ್ದಾರೆ :

'1958ರಲ್ಲಿ ಹೈಸ್ಕೂಲಿನಲ್ಲಿ ಒಂದು ಸ್ಪರ್ಧೆಯಲ್ಲಿ ಬಹುಮಾನವಾಗಿ ಬಂದ ಕ.ರಾ.ಕೃ. ಅವರ 'ಅಂಬಿಗರ ಗಂಗ' ಜನಪದ ಗೀತೆಗಳ ಸಂಗ್ರಹ ಕಂಡು ನನಗೆ ಆಶ್ಚರ್ಯವಾಯಿತು. ಯಾಕೆಂದರೆ ಅದರಲ್ಲಿದ್ದ ಹಾಡುಗಳನ್ನು ನಮ್ಮೂರಿನಲ್ಲೇ ಕೇಳಿದ್ದೆ,

ಕೆಲವನ್ನು ಕಲಿತಿದ್ದೆ. ನಮ್ಮೂರಿನಲ್ಲಿ ಸಿಗುವ ಹಾಡುಗಳನ್ನು ನಾನೂ ಸಂಗ್ರಹಿಸಬೇಕೆಂಬ ಆಲೋಚನೆ ನನಗೆ ಬಂತು. 1959ರ ಆಗಸ್ಟ್ ಸಮಯ. ಪಿ.ಯು.ಸಿ. ಓದಲು ಮೈಸೂರಿಗೆ ಹೋಗಿ ರಮಾವಿಲಾಸ ಅಗ್ರಹಾರದ 'ರಂಗಯ್ಯ ವಿದ್ಯಾರ್ಥಿ ನಿಲಯ'ದಲ್ಲಿ ವಾಸಿಸುತ್ತಿದ್ದೆ. ಅಲ್ಲಿಗೆ ಒಮ್ಮೆ ಶ್ರೀ ಎಸ್. ಕೆ. ಕರೀಂಖಾನ್ ಬಂದು ವಿದ್ಯಾರ್ಥಿಗಳ ಮುಂದೆ 'ಕೊಣವೇಗೌಡ' ಮೊದಲಾದ ಕೆಲವು ಜನಪದ ಗೀತೆಗಳನ್ನು ಹಾಡಿದರು. ಅಂದು ಅವರ 'ಜನಪದ ಗೀತೆ' ಎಂಬ ಸಂಗ್ರಹವನ್ನು ಅವರಿಂದಲೇ ಕೊಂಡುಕೊಂಡು ಓದಿದೆ. ಜನಪದ ಸಾಹಿತ್ಯ ಸಂಗ್ರಹಿಸಬೇಕೆಂಬ ಹುಚ್ಚು ಬಲವಾಯಿತು'.

ಹೀಗೆ ಸಂಗ್ರಹಿಸುವ ಒತ್ತಡಕ್ಕೆ ಸಿಕ್ಕಿದ ಲಿಂಗಯ್ಯ ಅವರು ಮೊದಲು ತಮ್ಮ ಹಳ್ಳಿಯಲ್ಲೇ ಸಂಗ್ರಹಿಸಲು ಪ್ರಾರಂಭಿಸಿದರು. ಅಲ್ಲಿಂದ ಮುಂದೆ ಸಂಗ್ರಹಕಾರ್ಯ ಹುಲ್ಲುಕೆರೆ, ಕೊತ್ತತ್ತಿ, ಮೈಸೂರು, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ವಿಸ್ತರಿಸಿಕೊಂಡಿತು.

'ಬಯಲುಸೀಮೆಯ ಜನಪದ ಗೀತೆಗಳು' ಎಂಬ ಈ ಸಂಕಲನವು ಕೇವಲ ಸಂಗ್ರಹಕ್ಕಷ್ಟೆ ಮೀಸಲಾಗಿಲ್ಲ. ಪ್ರೊ. ಲಿಂಗಯ್ಯ ಅವರು ಅವರ ಮಾತುಗಳಲ್ಲಿ ವೈಜ್ಞಾನಿಕ ಚಿಂತನೆಗಳನ್ನೂ ಹರಿಯಬಿಟ್ಟಿದ್ದಾರೆ'.

'ಈ ಸಂಗ್ರಹದ ಪ್ರಾರಂಭದ ನಾಲ್ಕು ಕಥಾನಕಗಳಿಗೆ 'ಜನಪದ ಕಥನಕಾವ್ಯ' (Folk Narrative Poetry) ಗಳೆಂದು ಹೆಸರಿಸಿದೆ. ಇಂಗ್ಲೀಷ್ ಪದದ ಪ್ರಭಾವದಿಂದ ಕೆಲವರು ಇಂಥಾ ಕಥನ ಕಾವ್ಯಗಳಿಗೆ 'ಲಾವಣಿ'ಗಳೆಂದು ಕರೆದಿದ್ದಾರೆ ಇದು ನನಗೆ ಇಷ್ಟವಿಲ್ಲ. ಕಾರಣ : 1) ನಮ್ಮ ಜನಪದ ಕಥನ ಕಾವ್ಯಗಳಿಗೂ ನಮ್ಮಲ್ಲೇ ಪ್ರಚಲಿತವಾಗಿರುವ ಲಾವಣಿಗಳಿಗೂ ವಸ್ತು ಭಾವ ಬಂಧ ವಿಸ್ತಾರ

ಮುಂತಾದ ಅಂಶಗಳಲ್ಲಿ ಹಲವು ವ್ಯತ್ಯಾಸಗಳಿವೆ. ಈ ಸಂಗ್ರಹದ ಕಥನ ಕಾವ್ಯಗಳನ್ನೂ ಶ್ರೀ ಸಿಂಪಿ ಲಿಂಗಣ್ಣ ಮತ್ತು ದಿ. ಪಿ. ಧೂಲಾರ 'ಜೀವನ ಸಂಗೀತ'ದ ಜನಪದ ಲಾವಣಿಗಳನ್ನೂ ತೌಲನಿಕವಾಗಿ ಅಭ್ಯಸಿಸಿದರೆ ಇವೆರಡು ಸಾಹಿತ್ಯ ಪ್ರಕಾರಗಳಿಗೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಗೊತ್ತಾಗುತ್ತದೆ. 2) ಕಳೆದ ಹನ್ನೊಂದು ವರ್ಷಗಳಲ್ಲಿ ಹಲವು ಕಥನ ಕಾವ್ಯಗಳನ್ನು ಸಂಗ್ರಹಿಸಿದ್ದೇನೆ. ಯಾವ ನಿರೂಪಕ (Informant) ನೂ ಇವುಗಳನ್ನು ಅಪ್ಪಿತಪ್ಪಿ ಕೂಡ 'ಲಾವಣಿ' ಎಂದು ಕರೆದಿಲ್ಲ. ಒಮ್ಮೆ ಹಲವು ಕಥನ ಕಾವ್ಯಗಳ ಸರಕು ಇಟ್ಟುಕೊಂಡಿದ್ದ ಒಬ್ಬ ನಿರೂಪಕಳನ್ನು ಬೇಕೆಂದೇ 'ಒಂದು ಲಾವಣಿ ಬಂದ್ರೆ ಹಾಡು' ಅಂದೆ. ಆಕೆ ಗಾಬರಿಯಾಗಿ 'ನಂಗೆ ಲಾವ್ಣಿ ಗೀವ್ಣಿ ಬರುಲ್ಲ. ಅದೇನೋ ಗೊತ್ತಿಲ್ಲ ವೋಗಿ' ಅಂದಳು. 'ಲಾವಣಿ ಬರದಿದ್ದರೆ ಬೇಡ ಕೊಡಗಿನ ಲಿಂಗರಾಜಮ್ಮನ ಕತೆ ಬಂದರೆ ಹಾಡು' ಎಂದು ಕೇಳಿದ್ದಕ್ಕೆ ಆಕೆ 'ಅದೇನೋ ವಸೂಸಿ ಬತ್ತದೆ' ಅಂದಳು. ಪರಿಸ್ಥಿತಿ ಹೀಗಿರುವಾಗ ಬಲವಂತವಾಗಿ ಈ ಸಾಹಿತ್ಯವನ್ನು ಲಾವಣಿಗಳೆಂದು ಏಕೆ ಕರೆಯಬೇಕು ? 3) ನಮ್ಮಲ್ಲಿ ಈಗಾಗಲೇ ಬಳಕೆಯಲ್ಲಿರುವ,'ಜನಪದ ಕಥನ ಕಾವ್ಯಗಳು' ಎಂಬ ಪದಸಮೂಹದಲ್ಲಿ ಅರ್ಥ ವಿವರ ಎಲ್ಲ ಇದೆ. ಇವನ್ನು 'ಲಾವಣಿ' ಎನ್ನುವಾಗ ಇದರೊಂದಿಗೆ 'ವಿಶಾಲಾರ್ಥದಲ್ಲಿ ಬಳಸಿದೆ' ಎಂದು ಕೊಂಡಿಸೇರಿಸಿ ಒತ್ತಿ ಹೇಳಬೇಕು. ಈ ರಗಳೆ ಏಕೆ ? ಇಂಗ್ಲೀಷ್‌ನ 'ಬ್ಯಾಲೆಡ್' ಎಂಬ ಪದವನ್ನು ಅದೇ ಹೆಸರಿನಲ್ಲಿ ಬೇಕಾದರೆ ಕರೆದುಕೊಳ್ಳಬಹುದು. ಆದರೆ 'ಬ್ಯಾಲೆಡ್'ನ್ನು 'ಲಾವಣಿ' ಎಂದು ಅನುವಾದಿಸಿ ಕರೆದರೆ ಈ ಅಪೂರ್ವ ಕತೆಗಳನ್ನು 'ದಸರಾ ಲಾವಣಿ', 'ವಸ್ತುಪ್ರದರ್ಶನ ಲಾವಣಿ', 'ಫ್ಯಾಮಿಲಿ ಪ್ಲಾನಿಂಗ್ ಲಾವಣಿ'ಗಳ

ಮಟ್ಟಕ್ಕೆ ನಾವಾಗಿ ತಂದಂತಾಗುತ್ತದೆ. ನನ್ನ ಪ್ರಕಾರ, 'ಜನಪದ ಕಥನ ಕಾವ್ಯ'ಗಳಲ್ಲಿ 'ಲಾವಣಿ'ಗಳನ್ನು ಒಂದು ವಿಭಾಗವಾಗಿ ಪರಿಗಣಿಸುವುದು ಹೆಚ್ಚು ಸೂಕ್ತ'.

ಪ್ರೊ. ಲಿಂಗಯ್ಯ ಅವರ ಇಂಥ ವಾಸ್ತವಾಂಶದ ಚಿಂತನೆಗಳ ಬಗ್ಗೆ ಜಾನಪದಾಸಕ್ತರು ಗಂಭೀರವಾಗಿ ಚಿಂತಿಸುವ ಅಗತ್ಯವಿದೆ. ಅವರು ಮುಂದುವರಿದು ಪಾಠಾಂತರಗಳ ಬಗ್ಗೆಯೂ ವಿಶ್ಲೇಷಣೆ ನಡೆಸಿದ್ದಾರೆ. ಇದು ಕನ್ನಡ ಜನಪದ ಗೀತ ಸಾಹಿತ್ಯದ ಸಂದರ್ಭದಲ್ಲಿ ಹೊಸ ಆಲೋಚನೆ. ಜನಪದ ಗ್ರಂಥ ಸಂಪಾದನೆಗೆ ಇದು ಬೆಳಕಿಂಡಿಯಾಗಿದೆ. ಕೆಲವು ಪದ್ಯಗಳಿಗೆ ಪಾಠಾಂತರ ಗುರುತಿಸಿರುವುದನ್ನು ವಿಶೇಷವಾಗಿ ಗಮನಿಸಬಹುದು. ಅಷ್ಟೇ ಅಲ್ಲ, ಅನಕ್ಷರಸ್ಥರಾದ ನಮ್ಮ ನಿರೂಪಕರು ಮಹಾಪ್ರಾಣ ಅಕ್ಷರಗಳನ್ನು ಬಳಸದಿರುವ ಅಂಶವನ್ನೂ ಚರ್ಚಿಸಿದ್ದಾರೆ. ಸೂಕ್ತ ಸಲಹೆಗಳನ್ನು ನೀಡಿ ತಾವು ಅನುಸರಿಸಿರುವ ಮಾರ್ಗವನ್ನೂ ಹೇಳಿದ್ದಾರೆ. 'ಯಾವ ಪದ್ಯದಲ್ಲೂ ನಿರೂಪಕರು ಹೇಳದ ಒಂದು ಪದವನ್ನೂ ಸೇರಿಸಿಲ್ಲ' ಎಂಬ ಅವರ ಮಾತು ಗಮನಾರ್ಹವಾದುದು. ಯಾಕೆಂದರೆ, ಸಂಗ್ರಹಿಸುವ ಸಾಹಿತ್ಯ ನಿರೂಪಕರ ಭಾಷೆಯಲ್ಲಿಯೇ ಇರಬೇಕೆಂಬ ಮಾತಿನ ಹಿನ್ನೆಲೆಯಲ್ಲಿ ಪ್ರಾಮಾಣಿಕತೆಯ ಸುಳುಹು ಇದೆ. ಭಾಷೆಯ ಮೂಲಕವೇ ಸಾಮಾಜಿಕ ಅಧ್ಯಯನ ಸಾಧ್ಯ ಎಂಬ ಸೂಚನೆಯೂ ಇಲ್ಲಿದೆ.

ಈ ಸಂಕಲನದ 'ಟಿಪ್ಪಣಿಗಳು' ಮತ್ತು 'ಅರ್ಥಕೋಶ' ಎಂಬ ವಿಭಾಗಗಳು ಕೂಡ ತಮ್ಮದೇ ರೀತಿಯಿಂದ ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. 'ಟಿಪ್ಪಣಿಗಳು' ಎಂಬ ವಿಭಾಗದಲ್ಲಿ ಎಲ್ಲ ಹಾಡುಗಳ ಸಾರಾಂಶವನ್ನು ಕೊಟ್ಟಿರುವುದರಲ್ಲಿ ವಿಶೇಷವೇನೂ

ಇಲ್ಲದಿದ್ದರೂ ನಾಲ್ಕು ಬಗೆಯ ಹಾಡುಗಳ ಬಗ್ಗೆ ಆಯಾ ವಿಭಾಗದ ಪ್ರಾರಂಭದಲ್ಲಿ ಲಿಂಗಯ್ಯ ಅವರು ನೀಡಿರುವ ವೈಜ್ಞಾನಿಕ ವಿಚಾರಗಳು ಸಂಕಲನಕ್ಕೊಂದು ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಡುತ್ತವೆ.

'ಜನಪದ ಕಥನ ಕಾವ್ಯಗಳು' ವಿಭಾಗದ ಪ್ರಾರಂಭದಲ್ಲಿ ಲೇಖಕರ ಅನೇಕ ಚಿಂತನೆಗಳಿವೆ. 'ಈಗ ಸಿಗುವ ಜನಪದ ಕಥನ ಕಾವ್ಯ ಸಾಮೂಹಿಕ ಸೃಷ್ಟಿಯಂತೆ ಕಂಡರೂ ಮೂಲತಃ ಅದು ಏಕವ್ಯಕ್ತಿಯ ಕೃತಿಯೇ. ಯಾವುದೋ ಒಂದು ಸಂದರ್ಭದಲ್ಲಿ, ಧಾರ್ಮಿಕ ಆಚರಣೆ, ಐತಿಹಾಸಿಕ ಘಟನೆ, ಬದುಕಿನ ರಾಗ, ದ್ವೇಷ ಅಥವಾ ಇನ್ನಾವುದೇ ಸಂದರ್ಭದ ಪ್ರಭಾವದಿಂದ, ಒಂದು ಕತೆ ಜನ್ಮತಾಳುತ್ತದೆ. ಅಗಲೇ ಅದು ಪದ್ಯ ಅಥವಾ ಗದ್ಯ, ನಾದ ಲಯಗಳ ರೂಪವನ್ನೂ ಹೊಂದುತ್ತದೆ. ಸ್ವಲ್ಪ ಕಾಲದ ಮೇಲೆ ಅದು ಇನ್ನೊಬ್ಬನ ಕಿವಿಯ ಮೇಲೆ ಬೀಳುತ್ತದೆ. ಎರಡನೆಯವನ ಕಿವಿಗೆ ಬಿದ್ದಾಗಲೇ ಮೂಲ ಕೃತಿಗೆ ಸಾರ್ವತ್ರಿಕತೆಯ ಬೀಜಾಂಕುರವಾಗುತ್ತದೆ. ಎರಡನೆಯ ವ್ಯಕ್ತಿಯಿಂದ ಮೂರನೆಯ, ನಾಲ್ಕನೆಯ ವ್ಯಕ್ತಿಯ ಕಿವಿಗೆ ಬೀಳುತ್ತಾ ಹೋದಂತೆ ಮೂಲ ಕೃತಿಯಲ್ಲಿ ಆಶ್ಚರ್ಯ ಹುಟ್ಟುವಷ್ಟು ಮಾರ್ಪಾಡುಗಳು ಕಾಣಿಸಿಕೊಳ್ಳುತ್ತವೆ. ಆದರೆ ಮೂಲ ಕೃತಿಯ ಹೂರಣ ಯಾವ ಕಾಲಕ್ಕೂ ನಾಶವಾಗುವುದಿಲ್ಲ'.

ಪ್ರೊ. ಡಿ. ಲಿಂಗಯ್ಯ ಅವರ ಈ ಅಭಿಪ್ರಾಯವನ್ನು ಜಾನಪದ ವಿದ್ವತ್‌ಲೋಕ ಅನುಮೋದಿಸುತ್ತದೆ. ಯಾಕೆಂದರೆ, ಕಥನ ಕಾವ್ಯವಷ್ಟೇ ಅಲ್ಲ, ಜಾನಪದದ ಯಾವ ಪ್ರಕಾರದ ಸಾಹಿತ್ಯವಾದರೂ ಅದು ಪ್ರಾರಂಭದಲ್ಲಿ ಏಕವ್ಯಕ್ತಿಯ ಸೃಷ್ಟಿಯೇ ಆಗಿರುತ್ತದೆ. ಯಾವಾಗ

ಅದು ಸಮೂಹವನ್ನು ಪ್ರವೇಶಿಸುತ್ತದೆಯೋ ಯಾವಾಗ ಅದು ಸಮೂಹದೊಳಗೆ ಅನುರಣಿಸತೊಡಗುತ್ತದೆಯೋ ಆಗ ಅದಕ್ಕೆ ಅಧಿಕೃತ ಮುದ್ರೆ ಬಿದ್ದು ಜಾನಪದವೆಂದು ಪರಿಗಣಿಸಲ್ಪಡುತ್ತದೆ. ಜಾಗತಿಕ ಮಟ್ಟದಲ್ಲಿ ಕೂಡ ಇಂಥ ಅಭಿಪ್ರಾಯಗಳಿವೆ. ಯಾಕೆಂದರೆ ಅದು ವಾಸ್ತವ. ಇಂಥ ಚಿಂತನೆಗಳನ್ನು ಲಿಂಗಯ್ಯ ಅವರು 1973ರಷ್ಟು ಹಿಂದೆಯೇ ದಾಖಲುಮಾಡಿದ್ದಾರೆ.

ಕಥನ ಕಾವ್ಯಗಳನ್ನು ಕುರಿತ ಅವರ ಚಿಂತನೆ ಅಲ್ಲಿಗೇ ನಿಲ್ಲುವುದಿಲ್ಲ. ಮುಂದುವರಿದು ಅವರು ಹೇಳುತ್ತಾರೆ: 'ಜನಪದ ಕಥನ ಕಾವ್ಯಗಳಲ್ಲಿ ಸಾಮಾಜಿಕ ಘಟನೆಯ ಒತ್ತಡವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿನ ಕಥಾವಿಧಾನ ಕೇವಲ ಸರಳವಾದುದಲ್ಲ. ಪುನರುಕ್ತಿಯ ಸೌಂದರ್ಯ, ಸಂವಾದದ ಚಕಮಕಿ; ಅಂತ್ಯದ ಕಡೆಗೆ ಶರವೇಗದಿಂದ ಓಡುವ ನಡಿಗೆ, ಬದುಕನ್ನು ತೀವ್ರವಾಗಿ ಅನುಭವಿಸುವ ಕಳಕಳಿ ಪ್ರಧಾನವಾಗಿರುತ್ತದೆ'.

ಕಥನ ಕಾವ್ಯಗಳಿಂದ ಹೊಮ್ಮುವ ವೈವಿಧ್ಯಮಯ ನಾದಗಳು, ಅರ್ಥಕ್ಕೆ ಅನುಗುಣವಾದ ಹಾಡಿನ ಅಂಶಗಳು, ನಿರ್ದಿಷ್ಟ ಛಂದಸ್ಸು, ಕತೆಯ ಒಂದೇ ಹೂರಣಕ್ಕೆ ಬಂದೊದಗುವ ಹೊರಾಲಂಕಾರಗಳು, ಪ್ರಾದೇಶಿಕ ವೈವಿಧ್ಯಗಳು ಮುಂತಾದ ಅಂಶಗಳು ಕೂಡ ಲಿಂಗಯ್ಯ ಅವರ ಚಿಂತನೆಯನ್ನು ಮುಂದುವರಿಸಿರುವುದು ಇಲ್ಲಿ ಕಂಡುಬರುತ್ತದೆ.

ದೇವರ ಪದಗಳ ಬಗ್ಗೆಯೂ ಲಿಂಗಯ್ಯ ಅವರ ಚಿಂತನೆಗಳು ಹರಿದಾಡಿವೆ. ಜನಪದರ ಕಲ್ಪನೆಯಲ್ಲಿ ದೇವರುಗಳ ಸಂಖ್ಯೆಗೆ ಮಿತಿಯೆಲ್ಲಿ? ಆ ಜಗತ್ತಿನ ವಿಶಾಲ ಬಯಲಿನಲ್ಲಿ ಜನಪದ ಮನಸ್ಸು

ಸ್ವಚ್ಛಂದವಾಗಿ ವಿಹರಿಸುವ ಮೂಲಕ ಸಂತೋಷವನ್ನು ಅನುಭವಿಸುತ್ತದೆ. ಹಾಗೆ ಸೃಷ್ಟಿಸಿಕೊಂಡ ದೇವರುಗಳಿಗೆ ಪೂಜೆ ಇತ್ಯಾದಿಗಳೂ ರೂಪತಳೆಯುತ್ತವೆ. ಭೌತಿಕ ಪೂಜೆಗಳೊಂದಿಗೆ ಸಾಹಿತ್ಯ ಪೂಜೆಯೂ ನಡೆಯುತ್ತದೆ. ದೇವರುಗಳನ್ನು ಕುರಿತ ವಿಪುಲ ಸಾಹಿತ್ಯ ಸೃಷ್ಟಿಯಾಗುತ್ತದೆ. ಅಂಥ ಸಾಹಿತ್ಯವನ್ನು ಕುರಿತು ಪ್ರೊ. ಲಿಂಗಯ್ಯ ಅವರ ಚಿಂತನೆ ಹೀಗಿದೆ :

'ದೇವರ ಪದಗಳಲ್ಲಿ ಕಾವ್ಯಾಂಶ ಕಡಮೆ ; ವರ್ಣನೆ ಹೆಚ್ಚು. ಪುನರುಕ್ತಿ ಸರ್ವೇಸಾಮಾನ್ಯ. ಹೆಸರು ಬದಲಾಯಿಸಿಬಿಟ್ಟರೆ ಒಂದು ಹಾಡು ಯಾವ ದೇವರಿಗೆ ಬೇಕಾದರೂ ಅನ್ವಯವಾಗಬಹುದು. ದೇವರ ಬಗೆಗೆ ಜನಪದರಿಗಿರುವ ಆತ್ಮೀಯತೆ, ಭಯ, ಭಕ್ತಿ ಅವರ್ಣನೀಯವಾದುದು. ಮನುಷ್ಯನ ಎಲ್ಲ ಸ್ವಭಾವಗಳನ್ನು ದೇವರಿಗೂ ಅನ್ವಯಿಸಿರುವುದು ಈ ಹಾಡುಗಳಲ್ಲಿ ಕಂಡುಬರುವ ವೈಶಿಷ್ಟ್ಯ. ದೇವರ ಪದಗಳ ಸೃಷ್ಟಿ ಬಹುತೇಕ ಸ್ತ್ರೀಯರದೇ'.

ಮದುವೆಯ ಪದಗಳನ್ನು ಕುರಿತು ಟಿಪ್ಪಣಿಯಲ್ಲಿ ಲೇಖಕರು ಹೀಗೆ ಹೇಳಿದ್ದಾರೆ : 'ಹಿಂದೂ ಸಮಾಜದ ಮದುವೆ ಬಹಳ ಕಟ್ಟುನಿಟ್ಟಾದುದು. ಅಪರಿಚಿತ ಹೆಣ್ಣು ಗಂಡುಗಳನ್ನು ಜೀವನಪರ್ಯಂತ ಒಗ್ಗೂಡಿಸುವ ಈ ಧಾರ್ಮಿಕ ಬಂಧನ ಹಲವು ಕಾಲದ ವ್ಯವಸ್ಥೆಯ ಫಲ. ಇಂದಿನಂತೆ ಕಣ್ಣುಮುಚ್ಚಿ ಕಣ್ಣುಬಿಡುವುದರಲ್ಲಿ ಆಗುವ ಮದುವೆಯಲ್ಲ ಹಿಂದಿನದು. ಮೂರು ಅಥವಾ ಐದು ದಿನಗಳವರೆಗೆ ಹಲವು ಶಾಸ್ತ್ರಗಳ ಸಹಿತ ನಡೆಯುವ ಪವಿತ್ರ ಕ್ರಿಯೆಯಾಗಿತ್ತು. ಪ್ರತಿಯೊಂದು ಶಾಸ್ತ್ರಕ್ಕೂ ಹಾಡುಗಳುಂಟು. ಈ ಹಾಡುಗಳಲ್ಲಿ ಹಳ್ಳಿಗರ ಶ್ರೀಮಂತ ಬದುಕಿನ ಪರಿಚಯವಿದೆ. ಪ್ರತಿ ಶಾಸ್ತ್ರದಲ್ಲೂ ಶುಭಕಾಮನೆ, ದೃಢನಂಬಿಕೆ ಎದ್ದುಕಾಣುತ್ತವೆ.

ಮದುವೆ ಪದಗಳ ಸಂಪೂರ್ಣ ಜವಾಬ್ದಾರಿ ಸ್ತ್ರೀಯರಿಗೇ ಸೇರಿದ್ದು'.

'ಒಸಗೆ' ದಾಂಪತ್ಯ ಜೀವನದ ಪ್ರಾಯೋಗಿಕ ಪ್ರಾರಂಭ. ಈ ಸಂದರ್ಭಕ್ಕೆಂದೇ ನಮ್ಮ ಜನಪದರು ವಿಶಿಷ್ಟ ರೀತಿಯಲ್ಲಿ ಹಾಡುಗಳನ್ನು ರಚಿಸಿಕೊಂಡಿದ್ದಾರೆ. ಮೈನೆರೆದ ಹೆಣ್ಣನ್ನು ಗುಡ್ಲು ಕೂಡುವುದು ಮತ್ತು ಆ ಸಂದರ್ಭದ ಹಾಡುಗಳು, ಮಡಿಲು ತುಂಬುವ ಶಾಸ್ತ್ರ ಮತ್ತು ಅದಕ್ಕೆ ಸಂಬಂಧಿಸಿದ ಹಾಡುಗಳು, ಆಮೇಲೆ ಒಸಗೆಯ ಸಂದರ್ಭದ ಹಾಡುಗಳು – ಇಷ್ಟನ್ನೂ 'ಒಸಗೆಯ ಪದಗಳು' ಎಂಬ ವಿಭಾಗದಲ್ಲಿ ಲಿಂಗಯ್ಯ ಅವರು ನೀಡಿದ್ದಾರೆ.

'ಹಿಂದಿನ ಕಾಲದಲ್ಲಿ ಮೈನೆರೆಯುವ ಮೊದಲೇ ಹುಡುಗಿಯ ಮದುವೆಯಾಗುತ್ತಿತ್ತು. ಅನಂತರ ಮೈನೆರೆದ ಮೇಲೆ ಹದಿನಾರನೇ ದಿನಕ್ಕೆ ಅಥವಾ ಒಂದು ಒಳ್ಳೆಯ ದಿವಸ ಒಸಗೆಯ ಶಾಸ್ತ್ರ.. ಉದಾಹರಣೆಗೆ : ವರ್ಷದ ಯುಗಾದಿಯ ಆಚೋ ಈಚೋ ಮದುವೆಯಾಗಿದ್ದು ಅನಂತರ ಹುಡುಗಿ 'ದೊಡ್ಡ'ದಾದರೆ ಗೌರಿಯ ಹಬ್ಬದಲ್ಲಿ ಒಸಗೆಯಾಗುತ್ತದೆ. ಒಸಗೆ, ಪ್ರಸ್ತ, ಸೋಬನ, ಸೋಬನ ಪ್ರಸ್ತ, ಗರ್ಭದಾನ ಶಾಸ್ತ್ರ ಹೀಗೆ ನಾನಾ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಒಸಗೆಯ ಉತ್ಸವ ಅದ್ದೂರಿಯಾಗಿ ನಡೆಯುತ್ತದೆ. ಒಸಗೆ ನಡೆಯುವುದು ಹೆಣ್ಣಿನ ಮನೆಯಲ್ಲೇ....'

ಒಸಗೆಯ ಪದಗಳ ವಿಭಾಗದಲ್ಲೇ ಲಿಂಗಯ್ಯ ಅವರು 'ಸನ್ನೆಯ ಪದಗಳ'ನ್ನೂ ಸೇರಿಸಿದ್ದಾರೆ. ವಾಸ್ತವವಾಗಿ ಇವು ಜರಿಯುವ ಪದಗಳು. ಇದನ್ನು ಒಸಗೆಯ ಸಂದರ್ಭದಲ್ಲಿ ಮಾತ್ರವಲ್ಲದೆ ಮದುವೆಯ ಸಂದರ್ಭಗಳಲ್ಲಿಯೂ ಬಳಸುವುದುಂಟು. ಬೀಗರ ಪದಗಳು, ಬೀಗರನ್ನು ಜರಿಯುವ ಪದಗಳು, ಹಾಸ್ಯ

ಪದಗಳು ಮುಂತಾದ ಹೆಸರುಗಳಿಂದಲೂ ಇವು ಗುರುತಿಸಲ್ಪಡುತ್ತವೆ. ಈ ಸನ್ನೆಯ ಪದಗಳನ್ನು ಕುರಿತು ಈ ರೀತಿ ವಿವರಣೆ ನೀಡಿದ್ದಾರೆ:

'ಜನಪದ ಗೀತೆಗಳಲ್ಲಿ ಸನ್ನೆಯ ಪದಗಳದೇ ಒಂದು ವೈಶಿಷ್ಟ್ಯ. ಮದುವೆ, ಸೋಬನಗಳಲ್ಲಿ ಗಂಡು ಹೆಣ್ಣಿನ ಕಡೆಯ ಹೆಂಗಸರು ಎರಡು ಗುಂಪುಗಳಾಗಿ ಒಬ್ಬರನ್ನೊಬ್ಬರು ಅಪಹಾಸ್ಯ ಮಾಡಲು ಇವುಗಳನ್ನು ಹಾಡುತ್ತಾರೆ. ಸಾಂಕೇತಿಕತೆ, ಒಗಟುತನ, ಗುಂಭತೆ, ಸಂಜ್ಞತೆಗಳು ಪ್ರಧಾನವಾಗಿರುವುದರಿಂದ ಇವುಗಳಿಗೆ ಸನ್ನೆಪದಗಳೆಂಬ ಹೆಸರು ಬಂದಿದೆ. ವ್ಯಂಗ್ಯ, ವಿಡಂಬನೆ, ಟೀಕೆ ಇಲ್ಲಿ ಹೆಚ್ಚು. ಈ ಹಾಡುಗಳಿಂದ ಬೀಗಬೀಗರಲ್ಲಿ ಕಾದಾಟವೇ ಕಾಣಿಸಿಕೊಂಡರೂ ಜನಪದರು ಇವುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ.

ತಮ್ಮ ಮುಖದ ಓರೆಕೋರೆ, ಚೆಲುವು ಕುರೂಪಗಳನ್ನು ತೋರಿಸುವ ಕನ್ನಡಿಯನ್ನು ಯಾರು ತಿರಸ್ಕರಿಸುತ್ತಾರೆ ? ಸನ್ನೆಯ ಪದಗಳ ಹಾಸ್ಯದ ನವುರನ್ನು, ಅಪಹಾಸ್ಯದ ಕಾವನ್ನು ಸುಲಭವಾಗಿ ಮರೆಯುವುದು ಸಾಧ್ಯವಿಲ್ಲ. ಮದುವೆ, ಒಸಗೆಗಳಲ್ಲಿ ಸನ್ನೆಯ ಪದಗಳಿಗಾಗಿಯೇ ಪ್ರತ್ಯೇಕವಾದ ಸಂದರ್ಭವಿಲ್ಲ. ಹಲವು ಶಾಸ್ತ್ರಗಳ ಹಾಡುಗಳ ಜೊತೆಜೊತೆಯಲ್ಲೇ ಇವೂ ಬೆರಸಿಕೊಂಡಿರುತ್ತವೆ. ಬೀಗರನ್ನು ಎದುರುಗೊಳ್ಳುವಾಗ, ಆರತಿ ಬೆಳಗುವಾಗ, ಊಟದ ಸಮಯಗಳಲ್ಲಿ ಇವು ನಿಚ್ಚಳವಾಗಿ ಕಾಣಿಸುತ್ತವೆ, ಅಷ್ಟೆ... ಸನ್ನೆಯ ಪದಗಳು ಸಂಪೂರ್ಣವಾಗಿ ಸ್ತ್ರೀಯರ ಸೃಷ್ಟಿ'.

ಈ ಸಂಗ್ರಹದ ಕೊನೆಯ ವಿಭಾಗದ 'ಜನಪದ ಭಾವಗೀತೆಗಳು' ಎಂಬುದಕ್ಕೆ ಪ್ರೊ. ಲಿಂಗಯ್ಯ ಅವರು ನೀಡಿರುವ ಟಿಪ್ಪಣಿ ಕೂಡ ಅನೇಕ ಕಾರಣಗಳಿಂದಾಗಿ ವಿಶಿಷ್ಟವೆನಿಸುತ್ತದೆ. ಮೊದಲನೆಯದಾಗಿ 'ಭಾವಗೀತೆ' ಎಂಬ ಸಂಬೋಧನೆಯೇ

ಜಾನಪದ ಸಂದರ್ಭದಲ್ಲಿ ಆಶ್ಚರ್ಯ ಉಂಟುಮಾಡುವಂಥದು. ಯಾಕೆಂದರೆ, ಇದುವರೆಗೆ ಯಾರೂ ಈ ಶಬ್ದವನ್ನು ಜನಪದ ಗೀತೆಗಳೊಂದಿಗೆ ಗುರುತಿಸಿಲ್ಲ ಅಥವಾ ಹಾಗೆ ಯಾರಾದರೂ ಬಳಸಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ಬಗೆಯ ಹಾಡುಗಳನ್ನು ಕುರಿತು ಲಿಂಗಯ್ಯ ಅವರು ಹೀಗೆ ವಿವರಿಸಿದ್ದಾರೆ :

'ಭಾವಾವೇಶಕ್ಕೆ ಪ್ರೇರಕವಾಗುವ ಗೀತೆಗಳನ್ನು ಸ್ಥೂಲವಾಗಿ ಭಾವಗೀತೆಗಳೆಂದು ಕರೆಯಬಹುದು. 'ಭಾವಾವೇಶ' ಎಂದ ಮಾತ್ರಕ್ಕೆ ಇವುಗಳಲ್ಲಿ 'ವೈಚಾರಿಕತೆ'ಯೇ ಇಲ್ಲವೆಂದು ಭಾವಿಸಿದರೆ ತಪ್ಪಾಗುತ್ತದೆ. ಭಾವಾವೇಶದ ಜೊತೆಗೆ ವೈಚಾರಿಕತೆಯನ್ನು ಒಳಗೊಂಡಿರುವುದೇ ಜನಪದ ಭಾವಗೀತೆಗಳ ವೈಶಿಷ್ಟ್ಯ. ಇವುಗಳಲ್ಲಿ ಒಂದು ಸಣ್ಣ ಸಂಗತಿಯ ಸುತ್ತ ಸ್ವಾರಸ್ಯವಾದ ಒಂದು ಸುಂದರ ಶಬ್ದಚಿತ್ರ ಮೂಡಿರುತ್ತದೆ. ಹೃದಯವನ್ನು ಮಿಡಿಸುವ ಸಂದರ್ಭದ ತೀವ್ರ ಸಂವೇದನೆ ಇಲ್ಲಿ ಮುಖ್ಯ. ಸಮಗ್ರ ಚಿತ್ರದ ಕಲ್ಪನೆ ಗೌಣ'.

ಇಷ್ಟು ಹೇಳಿದ ಮೇಲೂ ಲಿಂಗಯ್ಯ ಅವರಿಗೆ ತೃಪ್ತಿಯಾಗುವುದಿಲ್ಲ. ಈ ಸಂಕಲನದಲ್ಲಿ ತಾವು ನೀಡಿರುವ ಜನಪದ ಭಾವಗೀತೆಗಳ ರೂಪಗಳ ಬಗ್ಗೆಯೂ ಒಂದು ಸ್ಪಷ್ಟನೆ ನೀಡುತ್ತಾರೆ. ಯಾಕೆಂದರೆ ಅವರು ನೀಡಿರುವ ಭಾವಗೀತೆಗಳ ಈ ರೂಪಗಳು ಬಹುಪಾಲು ಅಲಭ್ಯ. ಅಲಭ್ಯ ರೂಪಗಳು ಇಲ್ಲಿ ಹೇಗೆ ರೂಪ ತಾಳಿದುವು ಎಂಬ ಕುತೂಹಲವನ್ನು ತಣಿಸುವುದೇ ಅವರ ಸ್ಪಷ್ಟನೆಯ ಉದ್ದೇಶ : 'ಪ್ರಸ್ತುತ ಸಂಕಲನದಲ್ಲಿ ಹತ್ತು ಭಾವಗೀತೆಗಳಿವೆ. ಇಲ್ಲಿನ ಸಾಂಸಾರಿಕ ಚಿತ್ರಗಳು ಇದೇ ರೀತಿಯಲ್ಲಿ ಉಂಡುಂಡೆಯಾಗಿ ಸಿಗುವುದಿಲ್ಲ. ಇವು ಯಾವ ಯಾವುದೋ ಸಂದರ್ಭದಲ್ಲಿ ನಿರೂಪಕರಿಂದ ಹೊರಬಂದವು. ರಸಭಾವಗಳಿಗೆ

ಪೋಷಕವಾಗುವಂತೆ ಕ್ರಮವಾಗಿ ಪೋಣಿಸಿದಾಗ ಈ ರೂಪ ಸಿದ್ಧಿಸಿದೆ. ಈ ಹಾಡುಗಳು ಇನ್ನಾವುದೋ ಸಂದರ್ಭದ ಅಥವಾ ಘಟನೆಯ ಅಥವಾ ಕಥಾನಕದ ಕೊಂಡಿಗಳಾಗಿರಬಹುದು. ಬಿಡಿಬಿಡಿಯಾಗಿ ಸಿಕ್ಕಿದ ಹಾಡುಗಳನ್ನು ಔಚಿತ್ಯವರಿತು ಹಿಡಿಹಿಡಿಯಾಗಿ ಸೇರಿಸಿರುವುದರಿಂದ ರಸದ ಘಟ್ಟಿಗಳಂತೆ ಕಾಣುತ್ತಿವೆ. ಇಷ್ಟರಿಂದಲೇ ಇವುಗಳಿಂದ ಒಸರುವ ರಸ ಅಸಾಮಾನ್ಯವಾದುದು'.

ಇನ್ನು ಈ ಸಂಕಲನದ ಇನ್ನೊಂದು ವೈಶಿಷ್ಟ್ಯವೆಂದರೆ ಇದರಲ್ಲಿನ ದೀರ್ಘ 'ಅರ್ಥಕೋಶ'. ಮೂವತ್ತೈದು ಪುಟಗಳಷ್ಟು ದೀರ್ಘವಾದ ಅರ್ಥಕೋಶವು ಕನ್ನಡದ ಬೇರೆ ಯಾವ ಸಂಗ್ರಹದಲ್ಲಿಯೂ ಇದುವರೆಗೆ ಕಂಡುಬಂದಿಲ್ಲ. ಜನಪದ ಸಾಹಿತ್ಯ ಸಂಕಲನಗಳಲ್ಲಿ ಅರ್ಥಕೋಶವು ಹೇಗಿರಬೇಕೆಂಬ ಲಿಂಗಯ್ಯನವರ ಚಿಂತನೆಗಳು, ಅವರ ಇನ್ನೊಂದು ಬೃಹತ್ ಸಂಕಲನವಾದ 'ಕರ್ನಾಟಕ ಜನಪದ ಕಾವ್ಯಗಳು' ಎಂಬ ಸಂಕಲನದ 'ಪ್ರಸ್ತಾವನೆ'ಯಲ್ಲಿವೆ.

6

1976ರಲ್ಲಿ ಪ್ರಕಟವಾದ 'ಕರ್ನಾಟಕ ಜನಪದ ಕಾವ್ಯಗಳು' ಎರಡು ಬಹುಮಾನಗಳನ್ನು ಗಳಿಸಿ ಸದ್ದುಮಾಡಿತು. ಇದು ಕೂಡ ಗಾತ್ರದಲ್ಲಿ ಹಾಗೂ ವೈವಿಧ್ಯದಲ್ಲಿ 'ಬಯಲುಸೀಮೆಯ ಜನಪದ ಗೀತೆಗಳು' ಸಂಕಲನಕ್ಕಿಂತ ಕಡಿಮೆಯೇನೂ ಇರಲಿಲ್ಲ. ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಥಮ ಬಹುಮಾನವನ್ನೂ ದೇವರಾಜ ಬಹದ್ದೂರ್ ಪ್ರಶಸ್ತಿಯನ್ನೂ ಇದು ಪಡೆದುಕೊಂಡಿತು. ಈ ಸಂಕಲನದ ವೈಶಿಷ್ಟ್ಯವನ್ನು ತಿಳಿಯುವ ಮುಂಚೆ 'ಅರ್ಥಕೋಶ'ವನ್ನು

ಕುರಿತ ಲಿಂಗಯ್ಯ ಅವರ ಮಾತುಗಳನ್ನು ನೋಡಬಹುದು.

'ಜನಪದ ಸಾಹಿತ್ಯ ಸಂಗ್ರಹಗಳಿಗೆ ಅರ್ಥಕೋಶವನ್ನು ತಪ್ಪದೆ ಕೊಡುವ ಪದ್ಧತಿ ಈಚಿನ ಸಂಗ್ರಹಕರಲ್ಲಿ ಕ್ರಮವಾಗಿ ನಡೆಯುತ್ತಿದೆ. ಈ ಕ್ರಮುವನ್ನು ಅನುಸರಿಸದವರೂ ಇದ್ದಾರೆ. ಹಲವು ಕಾರಣಗಳಿಗಾಗಿ ಇಂಥ ಗ್ರಂಥಗಳಿಗೆ ಅರ್ಥಕೋಶವನ್ನು ಅವಶ್ಯವಾಗಿ ಕೊಡಬೇಕು. ಆದರೆ ಇದು ಸುಲಭದ ಕಾರ್ಯವಲ್ಲವೆಂದು ಎಲ್ಲ ಸಂಗ್ರಹಕರಿಗೂ ಗೊತ್ತು. ಎಷ್ಟೋ ಪದಗಳಿಗೆ ಕನ್ನಡದಲ್ಲಿ ಈವರೆಗೆ ಲಭ್ಯವಾಗುವ ನಿಘಂಟುಗಳಲ್ಲೂ ಅರ್ಥ ಸಿಗುವುದಿಲ್ಲ. ಕಾರಣಗಳು ಸ್ಪಷ್ಟವಿದೆ : ಕನ್ನಡ ನಿಘಂಟುಕಾರರು ಬಹುಮಟ್ಟಿಗೆ ಕನ್ನಡ ಪ್ರಾಚೀನ ಗ್ರಂಥಗಳನ್ನು, ಸ್ವಲ್ಪಮಟ್ಟಿಗೆ ಆಧುನಿಕ ಗ್ರಂಥಗಳನ್ನು ಬಳಸಿಕೊಂಡಿದ್ದಾರೆ. ಜನಪದ ಗ್ರಂಥಗಳನ್ನು ಸಂಪೂರ್ಣವಾಗಿ ಕೈಬಿಟ್ಟಿದೆಯೆಂದೇ ಹೇಳಬೇಕು. ಜನಪದ ಸಾಹಿತ್ಯ, ಸಂಗ್ರಹಗಳ ನಿಜವಾದ ಪರಿಚಯವಿಲ್ಲದವರಿಂದ ಈ ಕ್ಷೇತ್ರದ ನಿಘಂಟು ಸಾಧ್ಯವಿಲ್ಲ'.

'ಅಭ್ಯಾಸದ ದೃಷ್ಟಿಯಿಂದ 'ಜನಪದ ನಿಘಂಟು'ವೊಂದರ ಅಗತ್ಯ ಬಹಳವಾಗಿದೆ. ಈವರೆಗೆ ಪ್ರಕಟವಾಗಿರುವ ಜನಪದ ಗ್ರಂಥಗಳನ್ನು ಬಳಸಿಕೊಂಡರೂ ಒಂದು ಸಾಧಾರಣ ನಿಘಂಟನ್ನು ತಯಾರಿಸಬಹುದು. ಸರಿಯಾದ ನಿಘಂಟು ರಚನೆಯಾಗಬೇಕಾದರೆ ಜನಪದ ಸಾಹಿತ್ಯ ಸಂಗ್ರಹಗಳ ಜೊತೆಗೆ, ಜನಪದ ಬದುಕಿನ ಎಲ್ಲ ಕ್ಷೇತ್ರದ ಶಬ್ದಗಳನ್ನೂ ಕ್ರೋಢೀಕರಿಸಬೇಕು. ಇದು ಒಬ್ಬಿಬ್ಬರಿಂದ, ಒಂದೆರಡು ವರ್ಷಗಳಲ್ಲಿ ಆಗುವ ಕೆಲಸವಲ್ಲ. ಇದಕ್ಕೆ ಜಾನಪದ ವಿದ್ವಾಂಸರ ದೊಡ್ಡ ಪಡೆಯೇ ಬೇಕು'.

ಹಿಂದಿನ ಅಧ್ಯಾಯವು ಅರ್ಥಕೋಶದ ಪ್ರಸ್ತಾಪದಿಂದ ಅಂತ್ಯಗೊಂಡಿದ್ದರಿಂದ ಈ ಅಧ್ಯಾಯದ ಪ್ರಾರಂಭದಲ್ಲೆ ಅದನ್ನು ಮುಂದುವರಿಸಬೇಕಾಯಿತು.

'ಕರ್ನಾಟಕ ಜನಪದ ಕಾವ್ಯಗಳು' ಎಂಬ ಈ ಸಂಕಲನವು 'ಬಯಲುಸೀಮೆಯ ಜನಪದ ಗೀತೆಗಳು' ಸಂಕಲನಕ್ಕಿಂತ ಹೆಚ್ಚು ವೈವಿಧ್ಯಗಳನ್ನು ಒಳಗೊಂಡಿವೆ. ಮೂವತ್ತೊಂಬತ್ತು ಪುಟಗಳಷ್ಟು ದೀರ್ಘವಾದ ವಿದ್ವತ್ಪೂರ್ಣ ಪ್ರಸ್ತಾವನೆಯಿಂದ ಈ ಸಂಕಲನವು ತನ್ನ ಮಹತ್ತನ್ನು ಹೆಚ್ಚಿಸಿಕೊಂಡಿದೆ. ಯಾಕೆಂದರೆ, ಇಲ್ಲಿ ಪ್ರೊ. ಲಿಂಗಯ್ಯ ಅವರು ಅಕ್ಷರಶಃ ಗಂಭೀರ ಅಧ್ಯಯನವನ್ನು ಕೈಗೊಂಡಿದ್ದಾರೆ.

ಜನಪದ – ಜಾನಪದ (Folk-Folkore) ಶಬ್ದಗಳ ನಡುವೆ ಬಳಕೆಯಲ್ಲಿರುವ ಅರ್ಥಗೊಂದಲವನ್ನು ಚರ್ಚಿಸುವುದರ ಮೂಲಕ 'ಪ್ರಸ್ತಾವನೆ' ಪ್ರಾರಂಭವಾಗುತ್ತದೆ. ಮುಂದೆ 'ಜನಪದ ಕಾವ್ಯ ಮತ್ತು ಅದರ ಸೃಷ್ಟಿ'ಯನ್ನು ಕುರಿತು ಚರ್ಚೆ ಮುಂದುವರಿಯುತ್ತದೆ. 'ವಾಕ್ ಪರಂಪರೆ, ಜನಪದ ಸಂಪ್ರದಾಯ, ಜನಪದ ಪರಂಪರೆ' ಇವುಗಳ ನಡುವೆ ಇರುವ ವ್ಯತ್ಯಾಸಗಳನ್ನು ಅರ್ಥಗಳನ್ನು, ಯಾವುದು ಸರಿ ಯಾವುದು ತಪ್ಪು ಎಂಬ ವಿಶ್ಲೇಷಣೆಯನ್ನು, ಈ ವಿಭಾಗದಲ್ಲಿ ಕಾಣುತ್ತೇವೆ. ಜನಪದ ಪದ್ಯ ಸಾಹಿತ್ಯವನ್ನು ಲಿಂಗಯ್ಯ ಅವರು ಇಲ್ಲಿ ಎರಡು ಬಗೆಯಾಗಿ ವಿಂಗಡಿಸಿದ್ದಾರೆ : 1. ಜನಪದ ಕಾವ್ಯ 2. ಜನಪದ ಜನಪ್ರಿಯ ಕಾವ್ಯ. ಯಾವುದು ಶುದ್ಧ ಜನಪದ ಕಾವ್ಯ, ಯಾವುದು ಜನಪದ ಜನಪ್ರಿಯ ಕಾವ್ಯ ಎಂಬುದಕ್ಕೆ ತಮ್ಮದೇ ಆದ ರೀತಿಯಲ್ಲಿ ವಿವರಣೆಯನ್ನು ನೀಡಿದ್ದಾರೆ.

ಪ್ರಸ್ತಾವನೆ ಮುಂದುವರೆಯುತ್ತದೆ. ಜನಪದ ಕಥನ ಕಾವ್ಯಕ್ಕೂ ಜನಪದ ಲಾವಣಿಗೂ ಇರುವ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. ಹದಿಮೂರು ಬಗೆಯ ವ್ಯತ್ಯಾಸಗಳನ್ನು ಗುರುತಿಸಿದ ಮೇಲೂ 'ಇದು ಸ್ಥೂಲವಾದ ವಿಶ್ಲೇಷಣೆ. ಈ ಪ್ರಸ್ತಾವನೆ ಬರೆಯುವಾಗ ಹೊಳೆದ ಅನಿಸಿಕೆಗಳನ್ನು ಮಾತ್ರ ಇಲ್ಲಿ ಪಟ್ಟಿಮಾಡಿದೆ. ಜನಪದ ಕಥನ ಕಾವ್ಯ ಮತ್ತು ಜನಪದ ಲಾವಣಿಗಳನ್ನು ಪ್ರತ್ಯೇಕವಾಗಿ ಕೂಲಂಕಷವಾಗಿ ಅಭ್ಯಸಿಸುವವರಿಗೆ ಇನ್ನೂ ಹೆಚ್ಚಿನ ಅಂಶಗಳೂ ವ್ಯತ್ಯಾಸಗಳೂ ಸ್ಪಷ್ಟವಾಗಿ ಗೋಚರಿಸುತ್ತವೆ' ಎಂದಿದ್ದಾರೆ.

ಒಟ್ಟಾರೆಯಾಗಿ ಲಿಂಗಯ್ಯ ಅವರು ಜನಪದ ಗೀತೆಗಳನ್ನು ಇಲ್ಲಿ ಹದಿನೇಳು ಭಾಗಗಳಾಗಿ ವಿಂಗಡಿಸಿದ್ದಾರೆ : ದೇವರ ಪದಗಳು, ಒಸಗೆಯ ಪದಗಳು, ಜನಪದ ಭಾವಗೀತೆಗಳು, ಜನಪದ ಸಂಕೀರ್ಣ ಗೀತೆಗಳು, ಬೀಸುವ ಪದಗಳು, ನಾಟಿಯ ಪದಗಳು, ವಾಜರ ಮದುವೆ ಪದಗಳು, ಆರತಿಯ ಹಾಡುಗಳು, ಸನ್ನೆಯ ಪದಗಳು, ರಂಗದ ಪದಗಳು, ಜನಪದ ಒಗಟಿನ ಹಾಡುಗಳು, ಮಕ್ಕಳ ಜನಪದ ಗೀತೆಗಳು, ಜನಪದ ಕಥನ ಕಾವ್ಯಗಳು, ಜನಪದ ಹಾಸ್ಯ ಕಥನ ಕಾವ್ಯಗಳು, ಜನಪದ ಖಂಡ ಮಹಾಕಾವ್ಯಗಳು, ರಾಳ್ಳಪಲ್ಲಿಯ ಜನಪದ ಗೀತೆಗಳು.

ಆಂಧ್ರಪ್ರದೇಶಕ್ಕೆ ಸೇರಿಹೋಗಿರುವ ರಾಳ್ಳಪಲ್ಲಿ ಎಂಬ ಗ್ರಾಮದಲ್ಲಿ ಸಂಗ್ರಹಿಸಿದವುಗಳನ್ನು ಆ ಹೆಸರಿನಿಂದಲೇ ವಿಂಗಡಿಸಿಕೊಂಡಿದ್ದಾರೆ. ಗೀತ ಸಾಹಿತ್ಯವನ್ನು ಅವರು ವಿಂಗಡಿಸಿರುವ ಕ್ರಮ, ಅರ್ಥಸ್ಪಷ್ಟತೆಗಾಗಿ ನೀಡಿರುವ ಅಡಿಟಿಪ್ಪಣಿಗಳು, ಅನುಬಂಧದಲ್ಲಿ ನೀಡುವ ಶಬ್ದಾರ್ಥಗಳು ಎಲ್ಲ ಘಟ್ಟಗಳಲ್ಲೂ ಲಿಂಗಯ್ಯ ಅವರು ಅಚ್ಚುಕಟ್ಟಾದ ಕೆಲಸಮಾಡಿದ್ದಾರೆ.

ಜನಪದ ಕಥೆಗಳು ಕೂಡ ಪ್ರೊ. ಡಿ. ಲಿಂಗಯ್ಯ ಅವರನ್ನು ಆಕರ್ಷಿಸದೆ ಬಿಟ್ಟಿಲ್ಲ. ಅದುವರೆಗೆ ಪ್ರಕಟವಾಗಿದ್ದ ಜನಪದ ಕಥೆಗಳಿಗಿಂತ ಭಿನ್ನವಾದ ಕಥೆಗಳನ್ನೊಳಗೊಂಡ ಅವರ ಮೊದಲ ಸಂಕಲನ 'ಮಣ್ಣಿನ ಮಿಡಿತ' ಪ್ರಕಟವಾದದ್ದು 1969ರಲ್ಲಿ. ಇದರಲ್ಲಿ ಇಪ್ಪತ್ತೆರಡು ಕಥೆಗಳಿವೆ. ಅದಾದ ಮೇಲೆ ಹದಿನೆಂಟು ಕಥೆಗಳನ್ನುಳ್ಳ 'ಪಡಿನೆರಳು' 1971ರಲ್ಲಿಯೂ, ಮೂವತ್ತೆರಡು ಕಥೆಗಳನ್ನುಳ್ಳ 'ಜನಪದ ಕಥಾಸಂಗಮ' 1978ರಲ್ಲಿಯೂ ಪ್ರಕಟವಾದವು. ಈ ಮೂರು ಪ್ರಮುಖ ಜನಪದ ಕಥಾಸಂಕಲನಗಳಲ್ಲದೆ, ಜನಪ್ರಿಯ ಮಾಲೆಯಲ್ಲಿ 'ಜನಪದ ಪ್ರಾಣಿ ಕತೆಗಳು' ಎಂಬ ಪುಟ್ಟ ಸಂಕಲನವೊಂದು 1980ರಲ್ಲಿ ಪ್ರಕಟವಾಗಿದೆ. ಈ ಪುಟ್ಟ ಸಂಕಲನವನ್ನು ಹೊರತುಪಡಿಸಿ ಲಿಂಗಯ್ಯ ಅವರು ಒಟ್ಟು ಎಪ್ಪತ್ತೆರಡು ಜನಪದ ಕಥೆಗಳನ್ನು ಪ್ರಕಟಿಸಿದಂತಾಗಿದೆ.

ಕನ್ನಡ ಜನಪದ ಕ್ಷೇತ್ರದಲ್ಲಿ ಜನಪದ ಕಥೆಗಳ ಹಲವಾರು ಸಂಕಲನಗಳು ಪ್ರಕಟವಾಗಿವೆ. ಅವನ್ನು ವರ್ಗೀಕರಿಸುವ ಕೆಲಸ ಆಗಿರಲಿಲ್ಲ. ಈ ಕೆಲಸವನ್ನು ಪ್ರಥಮವಾಗಿ ನಾವು ಕಾಣುವುದು ಡಾ॥ ರಾಗೌ ಅವರ 'ಕರ್ನಾಟಕ ಜನಪದ ಕಥೆಗಳು' ಸಂಕಲನದಲ್ಲಿ; ಅನಂತರ ಡಾ. ಜೀಶಂಪ ಅವರಲ್ಲಿ ಹಾಗೂ ಡಾ. ಎಚ್. ಜೆ. ಲಕ್ಕಪ್ಪಗೌಡರಲ್ಲಿ. ವರ್ಗೀಕರಣದ ವಿಚಾರದಲ್ಲಿ ಪ್ರೊ. ಡಿ. ಲಿಂಗಯ್ಯ ಅವರು ಹಿಂದೆ ಬಿದ್ದಿಲ್ಲ. ಅವರೆಲ್ಲರಿಗಿಂತ ಹೆಚ್ಚು ಬಗೆಯ ವರ್ಗಗಳನ್ನು ಕನ್ನಡ ಜನಪದ ಕಥೆಗಳಲ್ಲಿ ಕಂಡಿದ್ದಾರೆ : ನೀತಿ ಕಥೆಗಳು, ರಮ್ಯ ಕಥೆಗಳು, ಹಾಸ್ಯ ಕಥೆಗಳು, ಪ್ರಾಣಿ ಕಥೆಗಳು, ಅದ್ಭುತ ಕಥೆಗಳು, ಬುದ್ಧಿವಂತಿಕೆಯ ಕಥೆಗಳು ಈ ಬಗೆಯ

ವಿಭಾಗಗಳು ಸಾಮಾನ್ಯವಾಗಿ ಇತರರ ಸಂಕಲನಗಳಲ್ಲಿಯೂ ಕಾಣಸಿಗುವಂಥವು. ಅವುಗಳ ಜೊತೆಗೆ ಲಿಂಗಯ್ಯ ಅವರು, ಅತಿಮಾನುಷ ಪತ್ನಿಯರ ಕಥೆಗಳು, ಐತಿಹ್ಯ ಕಥೆಗಳು, ಮೋಸಗಾರರ ಕಥೆಗಳು, ದೆವ್ವದ ಕಥೆಗಳು ಹೀಗೆ ವರ್ಗೀಕರಣವನ್ನು ವಿಸ್ತರಿಸಿರುವುದು ಕಂಡುಬರುತ್ತವೆ.

ಜನಪದ ಕಥೆಗಳ ಬಗ್ಗೆ ಹೇಳುವಾಗ ಲಿಂಗಯ್ಯ ಅವರಲ್ಲಿ ಕಾಣಸಿಗುವ ವೈಶಿಷ್ಟ್ಯಗಳ ಬಗ್ಗೆಯೂ ಹೇಳಬೇಕಾಗುತ್ತದೆ. 'ಈಡಿಪಸ್ ಕಾಂಪ್ಲೆಕ್ಸ್' ಎಂಬುದು ಪ್ರಪಂಚದಾದ್ಯಂತ ಪ್ರಸಿದ್ಧವಾಗಿರುವ ಒಂದು ಆಶಯ. ಈಡಿಪಸ್‌ಗಿಂತಲೂ ಹೆಚ್ಚು ಶಕ್ತವಾದ, ಹೆಚ್ಚು ಪರಿಣಾಮಕಾರಿಯಾದ ಆಶಯ ಕನ್ನಡದಲ್ಲಿದೆ. ಅದು ತಾಯಿ ಮತ್ತು ಮಗನ ನಡುವೆ ಏರ್ಪಡುವ ಲೈಂಗಿಕ ಸಂಪರ್ಕ ಅಥವಾ ವಿವಾಹ ಸಂಬಂಧ. ಕನ್ನಡದಲ್ಲೆ 'ಸಾರಂಗಧರ' ಎಂಬ ಪರಿಣಾಮಕಾರೀ ಕಥೆಯಿದೆ. ಅದೊಂದೇ ಅಲ್ಲ. ಲಿಂಗಯ್ಯ ಅವರ 'ಪಡಿನೆರಳು' ಎಂಬ ಸಂಕಲನದಲ್ಲಿ ನೇರವಾದ 'ಮಗನನ್ನೆ ಮದುವೆಯಾದಳು' ಎಂಬ ಕಥೆಯಿದೆ. ಇದು ಈಡಿಪಸ್‌ಗಿಂತ ಪ್ರಬಲ ಆಶಯ ಉಳ್ಳದ್ದು. ಈ ವಿಶೇಷ ಶಕ್ತಿಯು ಈ ಕಥೆಯಲ್ಲಿರುವುದರಿಂದಲೇ ಇದು ಡಾ. ಎ. ಕೆ. ರಾಮಾನುಜಂ ಅವರ ಗಮನಸೆಳೆದು ಅವರಿಂದಲೇ ಇಂಗ್ಲೀಷ್‌ಗೂ ಪಯಣ ಬೆಳೆಸಿದೆ. ಬಹುಶಃ ಕನ್ನಡಿಗರೇ ಆದ ರಾಮಾನುಜಂ ಅವರು ನಮ್ಮಲ್ಲಿ ಈಡಿಪಸ್‌ಗಿಂತಲೂ ಪ್ರಬಲವಾದ ಆಶಯವಿದೆ ಎಂದು ಜಗತ್ತಿಗೆ ತೋರಿಸಲು ಲಿಂಗಯ್ಯ ಅವರ ಕಥೆಯನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದ್ದಾರೆ.

'ಮಗನನ್ನೆ ಮದುವೆಯಾದಳು' ಕಥೆಯ ಜೊತೆಗೆ

ರಾಮಾನುಜಂ ಅವರು ಲಿಂಗಯ್ಯ ಅವರ ಸಂಕಲನಗಳಿಂದ 'ದೀಪದ ಮಲ್ಲಿ' ಮತ್ತು 'ಮೂರ್ಖ ರಾಜ ಮುಠ್ಠಾಳ ಮಂತ್ರಿ' ಎಂಬ ಕಥೆಗಳನ್ನೂ ಇಂಗ್ಲೀಷಿಗೆ ಅನುವಾದಿಸಿದ್ದಾರೆ. ಡಾ. ದ. ರಾ. ಬೇಂದ್ರೆ ಅವರ 'ಸಾಯೋ ಆಟ' ಎಂಬ ನಾಟಕವು 'ಮೂರ್ಖ ರಾಜ ಮುಠ್ಠಾಳ ಮಂತ್ರಿ' ಕಥೆಯನ್ನು ಆಧರಿಸಿದೆ. ಅದೂ ಅಲ್ಲದೆ, ಈ ಕಥೆಯು ಇತರ ಭಾರತೀಯ ಭಾಷೆಗಳಲ್ಲಿಯೂ ಕಂಡುಬಂದಿದೆ.

8

ಅವರ ಇನ್ನುಳಿದ ಗ್ರಂಥಗಳೆಂದರೆ, ಸಂಶೋಧನ ಲೇಖನಗಳ ಸಂಕಲನಗಳು. ಜನಪದ ಸಾಹಿತ್ಯ ಸಂವಾದ (1982), ಜಾನಪದ ಶೋಧನ (2001), ಜಾನಪದ ನೋಟಗಳು (2006)–ಇವು ಈ ವಿಭಾಗದಲ್ಲಿ ಪ್ರವೇಶ ಪಡೆಯುತ್ತವೆ. 'ಜನಪದ ಸಾಹಿತ್ಯ ಸಂವಾದ'ದಲ್ಲಿ ಎಂಟು ಲೇಖನಗಳಿವೆ : 1. ಜನಪದ ಸಾಹಿತ್ಯ ಮತ್ತು ಮಹಿಳೆ 2. ಜನಪದ ಸಾಹಿತ್ಯ ಮತ್ತು ಮಕ್ಕಳು 3. ಹಳ್ಳಿಯ ಹಬ್ಬಗಳು 4. ನಾಟಿಯ ಪದಗಳು 5. ಮಾಸ್ತಿ ಪೂಜೆ 6. ಮಂಡ್ಯ ಜಿಲ್ಲೆಯ ಜನಪದ ಕುಣಿತಗಳು 7. ಮಂಡ್ಯ ಜಿಲ್ಲೆಯ ಜನಪದ ಸಾಹಿತ್ಯ 8. ಸನ್ನೆ ಪದಗಳಲ್ಲಿ ಹಾಸ್ಯ.

'ಜಾನಪದ ಶೋಧನ'ದಲ್ಲಿ ಆರು ಲೇಖನಗಳಿವೆ : 1. ಕಾಮನ ಹಬ್ಬದ ಪರಿಕಲ್ಪನೆ 2. ಶ್ರೀರಂಗಪಟ್ಟಣ ತಾಲ್ಲೂಕಿನ ಜನಪದ ಸಾಹಿತ್ಯ 3. ಶ್ರೀರಂಗಪಟ್ಟಣ ತಾಲ್ಲೂಕಿನ ಕೆಲವು ಸ್ಥಳನಾಮಗಳು 4. ಸ್ಥಳನಾಮಗಳ ಅಧ್ಯಯನ ನಡೆದು ಬಂದ ದಾರಿ 5. ಜನಪದ ಆಚರಣೆಗಳು 6. ಸ್ವಾತಂತ್ರ್ಯ ಸಂಗ್ರಾಮದ ಸ್ಥಳ ಐತಿಹ್ಯಗಳು.

'ಜಾನಪದ ನೋಟಗಳು' ಸಂಕಲನದಲ್ಲಿ ಹತ್ತು ಲೇಖನಗಳಿವೆ:

1. ಜಾನಪದದಲ್ಲಿ ಗಣನಾಯಕ 2. ಜನಪದ ಸಾಹಿತ್ಯದಲ್ಲಿ ಶರಣರು 3. ಜನಪದ ಸಂಸ್ಕೃತಿ ವಿಕಾಸ 4. ಸ್ವಾತಂತ್ರ್ಯ ಸಂಗ್ರಾಮ ಮತ್ತು ಜಾನಪದ 5. ಜಾಗತೀಕರಣ ಮತ್ತು ಬೆಂಗಳೂರು 6. ಕನ್ನಡ ಜನಪದ ಮಹಾಕಾವ್ಯಗಳು 7. ಜನಪದ ಗೀತೆಗಳ ಧ್ವನಿಸುರುಳಿಗಳು 8. ಜಾನಪದ ಮತ್ತು ಆಧುನಿಕತೆ 9. ಜನಪದ ಪ್ರದರ್ಶನ ಕಲೆಗಳ ರಕ್ಷಣೆ 10. ಕರಕುಶಲ ಕಲೆ.

ಪ್ರತಿಯೊಂದು ಲೇಖನದ ಪ್ರಾರಂಭದಲ್ಲೂ ಪ್ರಬುದ್ಧ ವಿಚಾರಗಳನ್ನುಳ್ಳ ಪ್ರಸ್ತಾವನಾ ರೂಪದ ಮಾತುಗಳಿರುತ್ತವೆ. ಆಯಾ ವಿಷಯಕ್ಕೆ ಸಂಬಂಧಪಟ್ಟದ್ದಷ್ಟೇ ಅಲ್ಲದೆ, ಜನಪದ ಬದುಕಿನ ಬಗ್ಗೆ, ಜನಪದ ಸಾಹಿತ್ಯದ ಬಗ್ಗೆ, ಅದರ ಉಗಮ ವಿಕಾಸಗಳ ಬಗ್ಗೆ ಅಲ್ಲಲ್ಲಿ ವಿಶ್ಲೇಷಣೆ ನಡೆಸುತ್ತಾರೆ.

ಒಂದು ಮುನ್ನುಡಿಯಲ್ಲಿ ಲಿಂಗಯ್ಯ ಅವರು ಲೇಖನಗಳನ್ನು ಬರೆದ ಸಂದರ್ಭಗಳನ್ನು ಹೇಳುವ ಮೊದಲು ತಾವು ಜಾನಪದ ಕ್ಷೇತ್ರಕ್ಕೆ ಕಾಲಿಟ್ಟ ಸಂದರ್ಭವನ್ನು ನೆನೆದಿದ್ದಾರೆ. ಜಾನಪದವನ್ನು ಸ್ನಾತಕೋತ್ತರ ತರಗತಿಗಳಲ್ಲಿ ಬೋಧಿಸಬೇಕಾದ ಸಂದರ್ಭ ಬಂದಾಗ, ಗಂಭೀರವಾಗಿ ಜಾನಪದ ಕ್ಷೇತ್ರಕ್ಕೆ ಪ್ರವೇಶಿಸುವುದು ಅನಿವಾರ್ಯವಾಯಿತು ಎಂದು ಹೇಳುತ್ತಾರೆ.

9

ಜನಪದ ಸಾಹಿತ್ಯವನ್ನು ಸಂಗ್ರಹ ಮಾಡುವಲ್ಲಿಂದ ಪ್ರಕಟಿಸುವವರೆಗಿನ ಘಟ್ಟಗಳು, ಅಲ್ಲಿ ಎದುರಿಸಬೇಕಾಗಿ ಬರುವ ಸಮಸ್ಯೆಗಳು ಸಂಘರ್ಷಗಳು ಇತ್ಯಾದಿಗಳನ್ನು ಕುರಿತ ಲಿಂಗಯ್ಯ ಅವರ ಇನ್ನೊಂದು ವಿಶಿಷ್ಟ ಗ್ರಂಥ 'ಜನಪದ ಸಾಹಿತ್ಯ ಸಂಗ್ರಹ ಮತ್ತು ಪ್ರಕಟಣೆ'ಯು 1978ರಲ್ಲಿ ಪ್ರಕಟವಾಗಿದೆ.

ಡಾ. ಕೆ. ಆರ್. ಸಂಧ್ಯಾರೆಡ್ಡಿಯವರೊಡನೆ ಸೇರಿ 'ಜಾನಪದ: ಸ್ವರೂಪ ಮತ್ತು ಸಾಹಿತ್ಯ' ಎಂಬ ಗ್ರಂಥವನ್ನು ಲಿಂಗಯ್ಯ ಅವರು 1997ರಲ್ಲಿ ಪ್ರಕಟಿಸಿದ್ದಾರೆ.

ಜನಪದ ಕಲೆಗಳನ್ನು, ಕಥೆಗಳನ್ನು, ಬದುಕನ್ನು, ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಹಲವು ವ್ಯಕ್ತಿಗಳನ್ನು ಕುರಿತು ಪುಟ್ಟಪುಟ್ಟ ಹಲವು ಪುಸ್ತಕಗಳನ್ನು ಕೂಡ ಪ್ರೊ. ಲಿಂಗಯ್ಯ ಅವರು ಪ್ರಕಟಿಸಿದ್ದಾರೆ : 1. ಕೋಲಾಟಗಳು 2. ಕರ್ನಾಟಕದ ಗ್ರಾಮದೇವತೆಗಳು 3. ಜನಪದ ಪ್ರಾಣಿಕತೆಗಳು 4. ಎದ್ದೊಂದು ಗಳಿಗೆ ನೆನೆದೇನ 5. ಬಾಳುವೆ ಮಾಡಿದರೆ ಬಾ ತಂಗಿ ಅಂದಾರು 6. ಜ್ಯೋತಿಯೇ ಆಗು ಜಗಕೆಲ್ಲ 7. ಸೋಬಾನೆ ಕೃಷ್ಣೇಗೌಡ 8. ಜಾನಪದ ಜಂಗಮ ಎಸ್. ಕೆ. ಕರೀಂಖಾನ್ 9. ವಾಗೀಶ್ವರಿ ಶಾಸ್ತ್ರಿ ಮುಂತಾದವು.

10

'ಎಂದು ಮನುಷ್ಯನಿಗೆ ಅಭಿವ್ಯಕ್ತಿಯ ಶಕ್ತಿ ಬಂತೋ ಅಂದು ಜನಪದ ಸಾಹಿತ್ಯ ಹುಟ್ಟಿತು'.

ಶಿಷ್ಟಪುರಾಣಗಳಲ್ಲಿ ಕಂಡುಬರುವ ಹೇರಳ ಜಾನಪದ ಅಂಶಗಳನ್ನು ಪ್ರಸ್ತಾಪಿಸುತ್ತ ಲಿಂಗಯ್ಯ ಅವರು ಹೇಳುತ್ತಾರೆ :

'ಜನಪದ ಸಾಹಿತ್ಯದ ಹಲವು ಆಶಯುಗಳು ನಮ್ಮ ಪುರಾಣಗಳಲ್ಲೂ ಕಂಡುಬರುವುದರಿಂದ ಜನಪದ ಸಾಹಿತ್ಯಕ್ಕೆ ಪುರಾಣಗಳು ಕೆಲಮಟ್ಟಿಗಾದರೂ ಋಣಿಯಾಗಿವೆ'.

ಪ್ರೊ. ಡಿ. ಲಿಂಗಯ್ಯ ಅವರ ಗಂಭೀರವಾದ ವಿಮರ್ಶೆ, ಪ್ರಬಂಧ, ಅಂಕಣ ಬರಹ ಗ್ರಂಥಗಳಲ್ಲಿ ಜನಪದಕ್ಕೆ ಸಂಬಂಧಿಸಿದ

ಲೇಖನಗಳಿವೆ; ಅವರ ಇನ್ನಿತರ ಸೃಜನಶೀಲ ಹೊತ್ತಗೆಗಳಲ್ಲಿ ಜನಪದ ಚಿಂತನಗಳಿವೆ : ಸ್ವಾತಂತ್ರ್ಯ ಚಳವಳಿ ಕುರಿತ ಚಾರಿತ್ರಿಕ ಪುಸ್ತಕಗಳಲ್ಲಿ ದಂಡಿಯಾಗಿ ಜನಪದ ಐತಿಹ್ಯಗಳಿವೆ. ಅವರ ಒಟ್ಟಾರೆ ಬರವಣಿಗೆಯಲ್ಲಿ ಜಾನಪದ ವಿಚಾರಧಾರೆ ಮೈದುಂಬಿಕೊಂಡಿದೆ.

ಅನೇಕ ಸಂದರ್ಭಗಳಲ್ಲಿ ಪ್ರೊ. ಡಿ. ಲಿಂಗಯ್ಯ ಅವರ ಆಲೋಚನೆಗಳು, ವಿಶ್ಲೇಷಣೆಗಳು ಖಚಿತ ರೂಪದಲ್ಲಿ ದೊರೆಯುತ್ತವೆ. ತಕ್ಕಡಿಯಲ್ಲಿ ತೂಗಿಬಿಡುವುದು, ಗಾಳಿಯಲ್ಲಿ ತೇಲಿಬಿಡುವುದು, ಲಿಂಗಯ್ಯನವರ ಜಾಯಮಾನವಲ್ಲ. ಆದ್ದರಿಂದಲೇ ಅವರ ಹೆಜ್ಜೆಗಳಲ್ಲಿ, ನಿಲುವುಗಳಲ್ಲಿ ಖಚಿತತೆ ಉದ್ದಕ್ಕೂ ನೆಲೆನಿಲ್ಲುತ್ತದೆ.

■

ಪ್ರೊ. ಡಿ. ಲಿಂಗಯ್ಯ ಅವರ ಪುಸ್ತಕ ಪ್ರಕಟಣೆಗಳ ಸಂಖ್ಯೆ ಎಂಬತ್ತರ ಗಡಿಯನ್ನು ದಾಟಿದೆ. ಜಾನಪದಕ್ಕೆ ಸಂಬಂಧಿಸಿದ ಪುಸ್ತಕಗಳ ಸಂಖ್ಯೆ ಹದಿನೇಳು. ಜೊತೆಗೆ ಕೆಲವು ಕಿರುಹೊತ್ತಿಗೆಗಳೂ ಸಂಪಾದಿತ ಗ್ರಂಥಗಳೂ ಉಂಟು. ಅವರ ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಅಧ್ಯಯನ ಹಾಗೂ ಚಿಂತನೆಗಳ ಬಗೆಗೆ ಪ್ರಸ್ತುತ ಗ್ರಂಥದಲ್ಲಿ ಪ್ರಸ್ತಾಪಿಸಿದೆ.

ಪ್ರೊ. ಡಿ. ಲಿಂಗಯ್ಯ ಅವರ ಆಲೋಚನೆಗಳು ವಿಶ್ಲೇಷಣೆಗಳು ಖಚಿತ ರೂಪದಲ್ಲಿ ದೊರೆಯುತ್ತವೆ. ತಕ್ಕಡಿಯಲ್ಲಿ ತೂಗಿಬಿಡುವುದು, ಗಾಳಿಯಲ್ಲಿ ತೇಲಿಬಿಡುವುದು ಅವರ ಜಾಯಮಾನವಲ್ಲ. ಆದ್ದರಿಂದಲೇ ಅವರ ಹೆಜ್ಜೆಗಳಲ್ಲಿ ನಿಲುವುಗಳಲ್ಲಿ ಖಚಿತತೆ ಉದ್ದಕ್ಕೂ ನೆಲೆ ನಿಲ್ಲುತ್ತದೆ.

ಕರ್ನಾಟಕ ಜಾನಪದ ಪರಿಷತ್ತು

ನಂ. 1, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054
E-mail : janapadaparishath@hotmail.com